
# ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

K.R.N.N. 240 ಸಂಪುಟ : 3 ಸಂಚಿಕೆ : 9 ಮೇ 1 ರಿಂದ 15, 1999 ಪುಟಗಳು : 24 ರೂ 5.

[ಲೇಖನ ಒಳಪುಟಗಳಲ್ಲಿ]

ಕೊಡಗು ಗೌಡ ಅರೆಭಾಷಿಕರ ಪ್ರಥಮ ಮಹಿಳಾ ನ್ಯಾಯಾಧೀಶರು

ಕು॥ ಅಚ್ಚಾಂಡಿರ ನವೀನಕುಮಾರಿ



## ಜೀವಾವಧಿ ಸದಸ್ಯತನ ಕೊಟ್ಟೊಳೊ

ಶ್ರೀಮತಿ ಮತ್ತ್ ಶ್ರೀ ದಂಬೆಕೋಡಿ ಚಿಣ್ಣಪ್ಪ
ಲೀಲಾವತಿ ದಂಪತಿಗ ಪತ್ರಿಕೆಯ ಅಭಿವೃದ್ಧಿ ದೃಷ್ಟಿಯಿಂದ
ಜೀವಾವಧಿ ಸದಸ್ಯತನ ಕೊಟ್ಟ್ ಸಹಕರಿಸೊಳೊ.
ಇವ್ರಕ ಕುಲಗುರು ವೆಂಕಟರಮಣನ ಕೃಪಾಕಟಾಕ್ಷ
ಇರಲಿಕ್ಕೇಳಿ ಸಂಗಾತಿ ಹಾರೈಸಿದೆ.

—ಸಂಪಾದಕಿ

---

**ನವೀಕರಣ :** 11-5-1999ರಲ್ಲಿ ಮಡಿಕೇರಿಯ ಗೌಡ ಸಮಾಜದಲ್ಲಿ ನಡೆಯಲಿರುವ ಗೌಡ ಮಹಿಳಾ ಒಕ್ಕೂಟದ ಸಮಾರಂಭಕ್ಕೆ ಕೊಡಗು ಸಂಗಾತಿ ಬಳಗವು ಬರುತ್ತಿರುವುದರಿಂದ ಅಂದು ನವೀಕರಣಗೊಳಿಸದೆ ಇರುವ ಸದಸ್ಯರು ಪತ್ರಿಕೆಯ ನವೀಕರಣವನ್ನು ಮಾಡುವಂತೆ ಕೋರಲಾಗಿದೆ. —ಸಂಪಾದಕಿ

---

**ಚಿಂತನ ಸಮಾರಂಭ :** ಅರೆಭಾಷೆ ಗೌಡ ಜನಾಂಗದ ಬಗ್ಗೆ ಚಿಂತನೆ ಮತ್ತು ಹಿತೈಷಿಗಳ ಸಭೆಯೊಂದನ್ನು ಇದೇ ತಿಂಗಳ ಕೊನೆಯ ವಾರದಲ್ಲಿ ನಡೆಸುವಂತೆ ತೀರ್ಮಾನಿಸಲಾಗಿದೆ. ಆಸಕ್ತಿ ಇರುವ ಹಿರಿ ಕಿರಿಯರೆಲ್ಲರು ಭಾಗ ವಹಿಸುವಂತೆ ಕೋರಲಾಗಿದೆ ದಿನಾಂಕ ಮತ್ತು ನಡೆಯುವ ಸ್ಥಳದ ಬಗ್ಗೆ ಸಂಗಾತಿಯ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

—ಸಂಘಟಕ C/o ಕೊಡಗು ಸಂಗಾತಿ, ಮೈಸೂರು

---

**ಹರಿ ಸೇವೆ :** ಕುಂಬಳದಾಳು ಗ್ರಾಮದ ತೆಕ್ಕಡ ಮನೆತನದ ಶ್ರೀ ವೆಂಕಟರಮಣ ದೇವರ ಹರಿಸೇವೆಯು ದಿನಾಂಕ 12-5-99ರಂದು ಜರುಗಲಿದೆ. ಸರ್ವ ಭಕ್ತಾದಿಗಳೆಲ್ಲರೂ ಆಗಮಿಸಿ ದೇವರ ಪ್ರಸಾದ ಸ್ವೀಕರಿಸುವಂತೆ ಕೋರಲಾಗಿದೆ. —ಪಟ್ಟೆದಾರ

---

**ವಾಯುಪಡೆ ಸದಸ್ಯರ ಸಮಾವೇಶ :** ಭಾರತೀಯ ವಾಯುಪಡೆ ಸದಸ್ಯರ ಮತ್ತು ಅವರ ಕುಟುಂಬ ದವರ ಸಮಾವೇಶವು ಇದೇ ತಿಂಗಳ 30ರ ಬೆಳಿಗ್ಗೆ 11 ಗಂಟೆಗೆ ಮಡಿಕೇರಿಯ ಕ್ಯಾಪಿಟಲ್ ವಿಲೇಜಿನಲ್ಲಿ ಜರುಗಲಿದೆ. ಭಾಗವಹಿಸಲ್ಪಡುವವರು ಇದೇ 20 ರೊಳಗೆ ಮಡಿಕೇರಿಯ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಅಧಿಕಾರಿಯನ್ನು ಸಂಪರ್ಕಿಸುವಂತೆ ಕೋರಲಾಗಿದೆ.

# ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :

**ಪಟ್ಟಡ ಪಿ. ಶೀಲಾಮಣಿ**

ಗೌರವ ಸಂಪಾದಕ :

**ಪಟ್ಟಡ ಎಂ. ಪ್ರಭಾಕರ**

ಮುದ್ರಕರು :

**ಮಣ್ಣಾಂಡ್ರ ಕೆ. ತಮ್ಮಯ್ಯ**

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

**ಕೊಡಗು ಸಂಗಾತಿ**

ನಂ. 35, "ಸವಿತಾ ನಿಲಯ"
1ನೇ ಕ್ರಾಸ್, 4ನೇ ಬ್ಲಾಕ್,
ಡಿವಿಜನಲ್ ಟೆಲಿಕಾಂ ಕಛೇರಿ ಹತ್ತಿರ,
ಜಯಲಕ್ಷ್ಮೀಪುರಂ, ಮೈಸೂರು-12.
ಫೋನ್ : 0821/516771

**-ಸಂಪರ್ಕಿಸುವ ವಿಳಾಸ-**

**ಮಣಿ ನಂಗಾರ್**
ಹೊಳ್ಳ ಕಾಂಪ್ಲೆಕ್ಸ್, ಮಂಗಳೂರು ರಸ್ತೆ,
ಚಿಕ್ಕಪೇಟೆ, ಮಡಿಕೇರಿ-571 201
ದೂರವಾಣಿ : 08272/29372

**ಬೈತಡ್ಕ ಜಾನಕಿ ಬೆಳ್ಯಪ್ಪ**
ನಂ. 21-16 ಎಲ್ ಐ.ಸಿ. ಹತ್ತಿರ
ರೇಸ್ ಕೋರ್ಸ್ ರಸ್ತೆ, ಮಡಿಕೇರಿ
ದೂರವಾಣಿ : 08272/28047

**ಕುಂಭಗೌಡನ ಸೋಮಣ್ಣ**
ಮಯೂರ ಕೋಲ್ಡ್ ಸ್ಟೋರೇಜ್
ಮುಖ್ಯ ರಸ್ತೆ, ಕುಶಾಲನಗರ-571234

**ಅಮ್ಮಾಜೀರ ಪೊನ್ನಪ್ಪ /
ಕಲ್ಲುಮುಟ್ಲು ಬಸಪ್ಪ**
20, 1ನೇ ಮೈನ್, 4ನೇ ಕ್ರಾಸ್
ಸಾಕಮ್ಮ ಗಾರ್ಡನ್, ಬಸವನಗುಡಿ,
ಬೆಂಗಳೂರು-04
ದೂರವಾಣಿ-080/6549669


## ಒಳನೋಟ

ಪುಟಗಳು


- ಸಂಪಾದಕೀಯ — 2
- ಶುಶ್ರೂಷಕಿಯೂ, ಕ್ರೀಡಾಪಟುವೂ ಆಗಿರುವ ಹುಲಿನಂಸೆ ಆರ್ ಸತಿ — 3
- ಹೇಳಿದ ಕೆಲಸ ಮಾಡಿಂ — 4
- ಮಹಿಳಾ ಮೀಸಲಾತಿ — 5
- ಅರೆಭಾಷಿಕರ ಪ್ರಥಮ ಮಹಿಳಾ ನ್ಯಾಯಾಧೀಶರಾದ ಕು|| ಅಚ್ಚಾಂಡಿರ ನವೀನಕುಮಾರಿ — 6
- ಆರೋಗ್ಯ ಚಿಂತನ : ರಕ್ತಭೇದಿ, ಸಂಸ್ಕೃತಿ — 7
- ಗೌಡ ಮಹಿಳಾ ಒಕ್ಕೂಟ, ಕುಶಾಲನಗರ — 8
- ಸತ್ತವರ ಶವ ಸಂಸ್ಕಾರ ಮತ್ತು ಅಂತಿಮ ಕ್ರಿಯೆ — 9
- ಸರ್ಪಗಂಧ! ಧಾರವಾಹಿ-5 — 10
- ಕವನ — 12
- ಮುತ್ತಾರ್ಮುಡಿ ಶ್ರೀ ಭದ್ರಕಾಳಿ ದೇವಿಯ ವಾರ್ಷಿಕ ಉತ್ಸವ — 13
- ಕೊಡಗು ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಶ್ರೀ ಬಾಲಗಂಗಾಧರನಾಥ ಸ್ವಾಮಿಜಿಯವರಿಂದ ಭರವಸೆ — 14


## ಅರೆ ಭಾಷಿಕ ವಿಭಾಗ


- ಸಹಸ್ರವೀರ್ಯದ ಅದ್ಭುತಗಳು — 15
- ನಗೆಹನಿ, ಹೆಸರು, ನಿಮಿಗೆ ಬೇಕಾ — 17
- ರೆಕ್ಕೆ ಇದ್ರೂ ಹಾರದ ಹಕ್ಕಿ — 18
- ಕರಿ ಚಿನ್ನ ಧಾರಾವಾಹಿ-25 — 19



**ಚಂದಾ ವಿವರ**

| | | |
|---|---|---|
| ಬಿಡಿ ಪ್ರತಿ | : | 5 ರೂ. |
| ಅರ್ಧ ವಾರ್ಷಿಕ | : | 60 ರೂ. |
| ವಾರ್ಷಿಕ ಚಂದಾ | : | 120 ರೂ. |

# ಸಂಪಾದಕೀಯ :

## ಬುದ್ಧಿಜೀವಿಗಳ ವಲಸೆ

ಸಮಾಜದಲ್ಲಿ ಬುದ್ಧಿ ಜೀವಿಗಳೆನಿಸಿಕೊಂಡಿರುವ ಡಾಕ್ಟರ್‌ಗಳು, ಇಂಜಿನಿಯರ್, ಗೆಜೆಟೆಡ್ ಆಫೀಸರುಗಳು ತಮಗೆ ಉದ್ಯೋಗಾವಕಾಶ ಸಿಕ್ಕಿದೊಡನೆ ಗೌಡರ ಯುವತಿಯರನ್ನು ಬಿಟ್ಟು ಡೌರಿ ಆಸೆಯಿಂದ ಕೊಡಗಿನಿಂದ ಹೊರಗಿನವರನ್ನು [ಸಮಾಜದಿಂದ ಹೊರಗಿರುವವರನ್ನು] ಮದುವೆಯಾಗುವ ಪ್ರವೃತ್ತಿ ಬೆಳೆಯುತ್ತಿದೆ. ಅದೇ ರೀತಿ ನಮ್ಮ ಸಮಾಜದ ಸ್ಥಿತಿವಂತರು ತಮ್ಮ ಮಗಳನ್ನು ಹೊರಗಿನವರಿಗೆ ವಿವಾಹ ಮಾಡುವ ಪ್ರವೃತಿ ಪ್ರಾರಂಭವಾಗಿದೆ. ಹಿಂದೆ ಒಂದು ಊರಿನಲ್ಲಿ ಒಬ್ಬ ಬಡವನಾಗಿದ್ದು ಬುದ್ಧಿವಂತನಾಗಿ ವಿದ್ಯೆ ಕಲಿಯುವುದರಲ್ಲಿ ಜಾಣನಾಗಿದ್ದ ಯುವಕನಿದ್ದರೆ ಆತನನ್ನು ತಾನು ಓದಿಸಿ ಹೆಣ್ಣು ಕೊಡುತ್ತೇನೆಂದು ಸ್ಥಿತಿವಂತರು ಮುಂದೆ ಬಂದು ಅಂತಹ ಯುವಕರನ್ನು ಓದಿಸಿ ಬುದ್ಧಿವಂತ ಯುವಕರಿಗೆ ಪ್ರೋತ್ಸಾಹ ಕೊಡುವ ವಿಶಾಲವಾದ ಹೃದಯವಂತರಿದ್ದರು. ಈಗ ಆ ರೀತಿ ವಿಶಾಲ ಹೃದಯವಂತರು ನಮ್ಮ ಸಮಾಜದಲ್ಲಿ ಕಾಣದಾಗಿದ್ದಾರೆ. ಈ ರೀತಿಯ ಪ್ರವೃತಿ ಮುಂದುವರೆದರೆ ವಿದ್ಯಾವಂತ ಹಾಗೂ ಹಣವಂತರ ವ್ಯವಹಾರಗಳೆಲ್ಲ ಅವರವರ ಅಂತಸ್ತಿನ ಮೇಲೆಯೇ ಹೊಂದಿಕೊಂಡು ಮೇಲ್ಮಟ್ಟದವರ ಒಡನಾಟ ಮೇಲ್ಮಟ್ಟದವರೊಡನೇ ಆಗಿ ಸಮಾಜದಲ್ಲಿ ಬಡವನಾಗಿದ್ದು ಬುದ್ಧಿವಂತ ಯುವತಿ-ಯುವಕರು ಅವರಿರುವ ಸ್ಥಿತಿಯಲ್ಲಿಯೇ ಮುಂದುವರಿಯುವ ಸ್ಥಿತಿ ಬಂದೊದಗಿದೆ. ಬಡವ ಹಾಗೂ ಮಧ್ಯಮ ವರ್ಗದವರೇ ಬೇರೆಯಾಗಿ ಹಣವಂತ ಹಾಗೂ ವಿದ್ಯಾವಂತರ ವರ್ಗವೇ ಬೇರೆಯಾಗಿ ಸಮಾಜ ಎರಡು ಹೋಳು ಆಗುವ ಪರಿಸ್ಥಿತಿ ಉಂಟಾಗಬಹುದೆಂಬ ಭಯ ಉಂಟಾಗಿದೆ.

ಯಾವ ರೀತಿಯಲ್ಲಿ ರಾಷ್ಟ್ರದಲ್ಲಿ ಬುದ್ಧಿ ಜೀವಿಗಳು ತಮ್ಮ ಪುರೋಭಿವೃದ್ಧಿಗಾಗಿ ಇಂಗ್ಲೆಂಡ್, ಅಮೆರಿಕಾ-ಜರ್ಮನಿ ಮುಂತಾದ ಅಭಿವೃದ್ಧಿ ಹೊಂದಿದ ಪಾಶ್ಚಾತ್ಯ ದೇಶಕ್ಕೆ ಹೋಗಿ ಅಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿ ಅಲ್ಲಿಯೇ ನೆಲಸಿ ಅಲ್ಲಿನ ಪ್ರಜೆಗಳಾಗಿ ಮಾತೃಭೂಮಿಯನ್ನೇ ಮರೆಯುವ ಸ್ಥಿತಿ ಬಂದಂತೆ ನಮ್ಮ ಸಮಾಜದ ಯುವಕ/ಯುವತಿಯರ ಪರಿಸ್ಥಿತಿಯೂ ಆಗಿದೆ ಸಮಾಜದಲ್ಲಿ ಪ್ರೀತಿಯ ಬಾಂಧವ್ಯಕ್ಕಿಂತ ಹಣದ ಹಾಗೂ ವ್ಯಕ್ತಿಗತವಾದ ಪ್ರತಿಷ್ಠೆಗೆ ಹೆಚ್ಚು ಮನ್ನಣೆ ಕೊಡುತ್ತಿದ್ದಾರೆ ಸಮಾಜದಲ್ಲಿ ನಮ್ಮತನ ಹೋಗಿ ನನ್ನತನ ಬಂದಿರುವುದರಿಂದ ಈ ರೀತಿಯ ಬದಲಾವಣೆಗೆ ಕಾರಣವಾಗಿದೆ. ತೋಟ, ಕಾರು, ಬಂಗಲೆ ವ್ಯಕ್ತಿಯ ಪ್ರತಿಷ್ಠೆಗೆ ಮನ್ನಣೆ ಇರುವುದರಿಂದ ಪ್ರಾಮಾಣಿಕತೆ, ಸರಳ ಜೀವನದ ಸಿದ್ಧಾಂತಗಳನ್ನು ಬದಿಗೊತ್ತಿರುವುದರಿಂದ ಈ ರೀತಿ ಆಗುವುದಕ್ಕೆ ಕಾರಣವಾಗಿದೆ. ಯಾವುದೇ ದೇಶದ ಚರಿತ್ರೆಯನ್ನು ಅಭ್ಯಾಸಿಸಿದಾಗ ದೊಡ್ಡ ದೊಡ್ಡ ರಾಜ್ಯಗಳನ್ನು ಕಟ್ಟಿ ವೈಭವದಿಂದ ಆಳಿದ ರಾಜರುಗಳ ಅಥವಾ ಧನಾಢ್ಯರಾದ ಜನರ ಹೆಸರು ಕಂಡುಬರುವುದು ಬಹಳ ವಿರಳ. ಆದರೆ ಪ್ರಜ್ಞಾವಂತರಾದ ಗೌತಮಬುದ್ಧ, ಅಶೋಕ ರಾಮಕೃಷ್ಣ ಪರಮಹಂಸ, ವಿವೇಕಾನಂದ, ಮಹಾತ್ಮಾಗಾಂಧಿ ಯವರಂತಹವರ ಹೆಸರುಗಳು ಬರೀ ಬೆರಳೆಣಿಕೆಯಷ್ಟು ಆಗಿದ್ದರೂ ಅವರುಗಳ ಹೆಸರು ಮಾನವ ಕುಲ ಇರುವವರೆಗೂ ಸ್ಥಿರವಾಗಿ ಉಳಿಯುತ್ತವೆ. ಅದೇ ರೀತಿ ಒಂದು ಸಮಾಜದ ಸ್ಥಿತಿಯೂ ಆಗಿದೆ. ಒಂದು ಸಮಾಜದ ಚರಿತ್ರೆಯಲ್ಲಿ ಪ್ರಜ್ಞಾವಂತ ಹಾಗೂ ಬುದ್ಧಿವಂತರು ಸ್ಥಿರವಾಗಿ ಉಳಿಯುವುದು ಅಂತಹವರಿಂದಲೆ. ಒಂದು ಸಮಾಜದ ಇರುವಿಕೆ ಗುರ್ತಿಸಲಾಗುವುದು.

ಆದ್ದರಿಂದ ಸಮಾಜದಲ್ಲಿ ಸಮತೋಲನವಾದ ಬೆಳವಣಿಗೆ ಅವಶ್ಯ. ಒಂದು ಸಮಾಜದಲ್ಲಿ ಕೆಲವೇ ಜನರ ಒಂದು ಗುಂಪು ಉಚ್ಚ ಸ್ಥಿತಿಯಲ್ಲಿದ್ದು ಇನ್ನೊಂದು ಹೆಚ್ಚಿನ ಸಂಖ್ಯೆಯ ಗುಂಪು ಹಿಂದುಳಿದಿದ್ದರೆ ಅದು ನಿಜವಾದ ಪ್ರಗತಿಯ ಸೂಚನೆಯೆಂದು ಹೇಳಲಾಗದು. ಸಮಾಜದಲ್ಲಿ ಎಲ್ಲರೂ ಸಮನ್ವಯ ಸಹಬಾಳ್ವೆಯಿಂದ ಇದ್ದರೆ ಮಾತ್ರ ಅದೊಂದು ಪರಿಪಕ್ವವಾದ ಸಮಾಜವಾದೀತೆಂದು ಸಂಗಾತಿಯ ಭಾವನೆ. ○

## ಯೋಧ

ಬೆಡಗಿನ ಕೊಡಗಿನ ಸೊಬಗಿನ ಕಥೆಯ
ಆಲಿಸೋ ಕನ್ನಡ ಕುವರ
ದೇಶ ರಕ್ಷಕರ ಶಿಸ್ತಿನ ಸಮರ
ಹೇಳುವೆ ನನ್ನಯ ಜನರಾ ॥ಪ॥

ದೇಶವು ನಮ್ಮದು ಮಣ್ಣದು ನಮ್ಮದು
ಹರಿಯಲಿ ರಕ್ತದ ಕೋಡಿ
ಏನೇ ಬರಲಿ ಗುಂಡಿಗೆ ಒಡೆಯಲಿ
ಉಳಿಯಲಿ ಉಸಿರಿನ ಬಂಡಿ ॥ ಪ ॥
ಚಂಡ, ಮುಂಡರ ಚೆಂಡಾಡುವೆವು
ಕಂಡ ಭಕುತರ ಕೊಂಡಾಡುವೆವು
ಪುಂಡರೆಲ್ಲರ ಮುಂಡನ ಮರ್ಧಿಸಿ
ದಂಡಿನ ಕೀರ್ತಿಯ ಬೆಳೆಸುವೆವು ॥ ಪ ॥
ಏರಲಿ ನಮ್ಮಯ ತ್ರಿವರ್ಣ ಧ್ವಜವು ನಿನಗಿದೊ
ನಮ್ಮಯ ನಮನ
ಕೊಡಗಿನ ಪುತ್ರರ ಕಾಯಲಿ ಎಂದೂ ತಿರುಪತಿ ವೆಂಕಟ್ರಮಣ
ತಿರುಪತಿ ವೆಂಕಟರಮಣ...ತಿರುಪತಿ ವೆಂಕಟರಮಣ ॥ಪ॥

—ತೀರ್ಥ ಅರಂಬೂರು [ಚೆಂಬು] ಚೆನ್ನೈ.

# ಶುಶ್ರೂಷಕಿಯೂ, ಕ್ರೀಡಾಪಟುವೂ ಆಗಿರುವ ಹುಲಿಮನೆ ಆರ್. ಸತಿ

ಪ್ರತಿಭೆ ಎಲ್ಲಿದ್ದರೂ ಬೆಳಗುತ್ತದೆ—ಬೆಳಗಲು ಸೂಕ್ತ ಅವಕಾಶವಿದ್ದಲ್ಲಿ! ಬಹುಮಂದಿ ಪ್ರತಿಭಾವಂತರು ಕಾಡಿನ ಕುಸುಮಗಳಂತೆ ಅಗೋಚರವಾಗಿವೆ. ಮಡಿಕೇರಿ ತಾಲ್ಲೂಕಿನ ಮದೆನಾಡಿನಲ್ಲಿ ಹಲವಷ್ಟು ಪ್ರತಿಭಾ ಕಿಡಿಗಳಿವೆ. ಕೆಲವು ಕಿಡಿಗಳು ಪ್ರಕಾಶಿಸುತ್ತಿವೆ ಮತ್ತೆ ಕೆಲವು ಹಾತೊರೆಯುತ್ತಿವೆ.

ಹುಲಿಮನೆಯ ಹೆಸರನ್ನು ನೀವು ಈ ಹಿಂದೆ ಕೇಳಿರುವಿರಿ. ವಿದ್ಯಾರ್ಥಿನಿಯಾಗಿದ್ದುಕೊಂಡು ರಾಷ್ಟ್ರಮಟ್ಟದ ಹಾಕಿ ಕ್ರೀಡೆಯಲ್ಲಿ ಪಾಲ್ಗೊಂಡ ಕುವರಿ ಮಂಜುಳ ಪ್ರತಿಭಾವಂತೆ. ಇವಳ



ಕುರಿತು 'ಕೊಡಗು ಸಂಗಾತಿ' ಈ ಹಿಂದೆ ಸಂದರ್ಶನ ಲೇಖನವನ್ನು ಪ್ರಕಟಿಸಿದಲ್ಲದೆ ಈಗ ತನ್ನ ಅಕ್ಕ ಸತಿಯ ಸಂದರ್ಶನವನ್ನು ಪ್ರಕಟಿಸಲು ಹೆಮ್ಮೆಪಡುತ್ತದೆ.

ಸತಿ ಹುಲಿಮನೆ ಶ್ರೀ ರಾಮಣ್ಣ ಮತ್ತು ಶ್ರೀಮತಿ ಚಂದ್ರಾವತಿಯವರ ಹಿರಿಯ ಮಗಳು. ಈಕೆ ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಗೋಳಿಕಟ್ಟೆ ಶಾಲೆಯಲ್ಲಿಯೂ ಪ್ರೌಢ ಶಾಲೆಯಲ್ಲಿದ್ದಾಗ ಯೋಗ ಶಿಕ್ಷಣವನ್ನು ಪಡೆದುದರಿಂದ ಉಂಟಾದ ಪ್ರಯೋಜನವನ್ನು ಆಕೆ ಸದಾ ಸ್ಮರಿಸುತ್ತಾಳೆ. ಪಿ.ಯು.ಸಿ. ವಿದ್ಯಾಭ್ಯಾಸವನ್ನು ಮಡಿಕೇರಿಯ ಸರಕಾರಿ ಪ. ಪೂ. ಕಾಲೇಜಿನಲ್ಲಿ ಪಡೆದಳು. ಈ ಕಾಲೇಜಿನಲ್ಲಿದ್ದಾಗ ರಾಜ್ಯಮಟ್ಟದ ಕ್ರೀಡಾ ಸ್ಪರ್ಧೆ [ಓಟ] ಗಾಗಿ ನಡೆದ ಆಯ್ಕೆಯಲ್ಲಿ ಮೋಸ ನಡೆದುದರ ಬಗ್ಗೆ ಸತಿ ಈಗಲೂ ಕಣ್ಣೀರು ಮಿಡಿಯುತ್ತಾಳೆ. ಕ್ರೀಡಾ ಜಗತ್ತಿನಲ್ಲಿ ಮೋಸಕ್ಕೆ ಅವಕಾಶ ಕೊಟ್ಟಲ್ಲಿ ನಾವು ಹಿಂದುಳಿಯುತ್ತೇವೆ ಎನ್ನುತ್ತಾಳೆ. ಈ ಮಾತು ನಿಜ ತಾನೆ ?

ಪಿ.ಯು ಸಿ. ವಿದ್ಯಾಭ್ಯಾಸದ ಬಳಿಕ ಸತಿ ಬೆಂಗಳೂರಿನ ಕೆಂಪೇಗೌಡ ಆಸ್ಪತ್ರೆಯಲ್ಲಿ ಶುಶ್ರೂಷಕಿ [ಸ್ಟಾಫ್‌ನರ್ಸ್] ತರಬೇತಿಗಾಗಿ ಆಯ್ಕೆಯಾದಳು. ಈ ತರಬೇತನ್ನು ಯಶಸ್ವಿಯಾಗಿ ಪೂರೈಸಿದ ಈಕೆ ಈಗ ಅದೇ ಆಸ್ಪತ್ರೆಯಲ್ಲಿ ಸ್ಟಾಫ್‌ನರ್ಸ್ ಆಗಿ ಸೇವೆ ಸಲ್ಲಿಸುತ್ತಿದ್ದಾಳೆ. ತರಬೇತಿಯ ಅವಧಿಯಲ್ಲಿ ತನ್ನ ತಂಡಕ್ಕೆ ಯೋಗಾಸನವನ್ನು ಹೇಳಿಕೊಡುತ್ತಿದ್ದಳು. ಆ ಮೂಲಕ ಆ ತಂಡದ ಯೋಗ ಗುರುವಾದಳು. ಪ್ರೌಢ ವಿದ್ಯಾಭ್ಯಾಸದ ಕಾಲದಲ್ಲಿ ಪಡೆದ ಯೋಗ ಶಿಕ್ಷಣದ ಸದುಪಯೋಗ ಸತಿಗೆ ಈ ರೀತಿಯಲ್ಲಿ ಸಹಾಯವಾಯಿತು ಸತಿಗೆ ಗೌರವ ತಂದುಕೊಟ್ಟಿತು. ಈಗ ಇವಳು ಉದ್ಯೋಗಿಯಾಗಿದ್ದರೂ ಬಿಡುವಿನ ವೇಳೆಯನ್ನು ಕ್ರೀಡಾ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವಳು. ಇಂದು ಕುವೆಂಪು ಲಲಿತಕಲಾ ಸಂಘದ ಸದಸ್ಯೆಯಾಗಿರುವಳು. ಈಕೆ ಸುಮಾರು 15 ಬಗೆಯ ಅಣುಕು [ಮಿಮಿಕ್ರಿ] ಪ್ರದರ್ಶನ ನೀಡಬಲ್ಲಳು. ಬೆಂಗಳೂರಿನ ಕುವೆಂಪು ಲಲಿತ ಕಲಾ ಸಂಘದವರು 1998ರಲ್ಲಿ ಗಂಧಕಾವಲು ಎಂಬ ಸ್ಥಳದಲ್ಲಿ ನಡೆಸಿದ ಕ್ರೀಡೋತ್ಸವದಲ್ಲಿ ಕೆಂಪೇಗೌಡ ಸಂಸ್ಥೆಗಳೆಲ್ಲವೂ ಪಾಲ್ಗೊಂಡಿದ್ದವು. ಕೆಂಪೇಗೌಡ ಸಂಸ್ಥೆಗಳು ಒಂದೆರಡಲ್ಲ. ಇಂಜಿನಿಯರಿಂಗ್ ಕಾಲೇಜು, ದಂತ ವೈದ್ಯಕೀಯ ಕಾಲೇಜು, ವಿಜ್ಞಾನ ಮತ್ತು ಕಲಾ ಕಾಲೇಜು, ಡಿ. ಫಾರ್ಮಾ ಕಾಲೇಜು, ನರ್ಸಿಂಗ್ ಕಾಲೇಜು ಹೀಗೆ ಹೆಸರಿಸುತ್ತಾ ಹೋದರೆ ಅದೆಷ್ಟೋ ಸಂಸ್ಥೆಗಳಿವೆ. ಈ ಎಲ್ಲಾ ಸಂಸ್ಥೆಗಳ ವಿದ್ಯಾರ್ಥಿಗಳು, ಆಸ್ಪತ್ರೆ ಸಿಬ್ಬಂದಿಗಳೆಲ್ಲರೂ ಕೂಡಿ ನಡೆಸಿದ ಕ್ರೀಡಾ ಸ್ಪರ್ಧೆಗಳಲ್ಲಿ ಸತಿ "ಛಾಂಪಿಯನ್" ಆಗಿ ಮೆರೆದಳು. ಹಲವಾರು ಸ್ಪರ್ಧೆಗಳಲ್ಲಿನ ಮೊದಲ ಬಹುಮಾನಗಳನ್ನು ತನ್ನ ಬುಟ್ಟಿಗೆ ಹಾಕಿಕೊಂಡಳು. 20 ರಿಂದ 35 ವರ್ಷದ ಮಿತಿಯಲ್ಲಿರುವವರಿಗಾಗಿ ನಡೆದ 100 ಮೀ ಓಟ, 200 ಮೀ ಓಟ, ನಿಂಬೆ ಚಮಚ ಓಟ, ಭಾರದ ಗುಂಡು ಎಸೆತ, ಅಣುಕು ಪ್ರದರ್ಶನ ಈ ಎಲ್ಲದರಲ್ಲೂ ಪ್ರಥಮ ಸ್ಥಾನ ಪಡೆದ ಸತಿ ಕಣಿದಾಡಿದಳು.

1988ರಲ್ಲಿ ನಡೆದ ಮಡಿಕೇರಿ ತಾಲ್ಲೂಕು ಮಟ್ಟದ ಗ್ರಾಮೀಣ ಕ್ರೀಡಾ ಕೂಟದ 4X100 ಮೀ. ರಿಲೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, 1992ರಲ್ಲಿ ಕೊಡಗು ಜಿಲ್ಲಾ ದಸರ ಕ್ರೀಡಾ ಕೂಟದಲ್ಲಿ 100 ಮೀ. ಓಟದಲ್ಲಿಯೂ ಪ್ರಥಮ ಸ್ಥಾನ ಪಡೆದಿರುವಳು. ಈ ಎಲ್ಲದರ ಬಗ್ಗೆ ದೊರೆತ ಬಹುಮಾನಗಳು ಮತ್ತು ಅಭಿನಂದನಾ ಪತ್ರಗಳು ಸಾಕಷ್ಟು ಬಂದಿವೆ.

ಆದರ್ಶ ಶುಶ್ರೂಷಕಿ, ತನ್ನೆಲ್ಲಾ ಕ್ಷೇತ್ರದಲ್ಲಿ ಆದರ್ಶತನವನ್ನು ಕಾಪಾಡಿಕೊಂಡು ತನ್ನ ಮನೆತನದವರಿಗೂ, ಊರಿಗೂ ಖ್ಯಾತಿ ತರುತ್ತಿರುವ ಸತಿಗೆ ಸಂಗಾತಿಯ ಅಭಿನಂದನೆಗಳು. ○

ಸಂದರ್ಶನ : ಬಿ. ಆರ್. ಜೋಯಪ್ಪ, ಮದೆ.

## ಹೇಳಿದ ಕೆಲಸ ಮಾಡಿರಿ....

ನಿಮಗೆ ವಹಿಸಿದ ಕೆಲಸವನ್ನು ನೀವು ಎಷ್ಟು ಕುಶಲತೆಯಿಂದ ನಿರ್ವಹಿಸುತ್ತೀರಿ ಎನ್ನುವುದಕ್ಕೆ ಈ ಪರೀಕ್ಷೆ. ಒಂದು ಪೆನ್ನನ್ನು ಜೊತೆಯಲ್ಲಿಟ್ಟುಕೊಂಡು ಈ ಕೆಳಗಿನ ಸಾಲುಗಳನ್ನು ಪೂರ್ತಿ ಓದಿ ನಿಮಗೆ ಎಷ್ಟು ಸಾಧ್ಯವೋ ಅಷ್ಟು ಬೇಗ ಕೆಳಗೆ ಹೇಳಿದ ಕೆಲಸವನ್ನು ಮಾಡಿ ಮುಗಿಸಿರಿ

1 ನಿಮ್ಮ ಹೆಸರನ್ನು ಈ ಪುಟದ ಬಲತುದಿಯಲ್ಲಿ ಬರೆಯಿರಿ

2 ಒಂದನೇ ವಾಕ್ಯದಲ್ಲಿರುವ 'ಹೆಸರನ್ನು' ಇದರ ಸುತ್ತ ಒಂದು ಗೆರೆ ಎಳೆಯಿರಿ

3 ಈ ಲೇಖನದ ತಲೆಬರಹ [ಶೀರ್ಷಿಕೆ]ಯ ಸುತ್ತಾ ಒಂದು ಗೆರೆ ಎಳೆಯಿರಿ

4. ಎರಡನೇ ವಾಕ್ಯದ ಕೆಳಗೆ ಪೂರ್ತಿಯಾಗಿ ಒಂದು ಗೆರೆ ಎಳೆಯಿರಿ

5. ಈ ಪುಟದ ಎಡಭಾಗದಲ್ಲಿ 'X' ಗುರುತು ಮಾಡಿರಿ.

6. 'X' ಗುರುತಿನ ಸುತ್ತಾ ಒಂದು ಗೆರೆ ಎಳೆಯಿರಿ

7. ನೀವು ಹುಟ್ಟಿದ ಸ್ಥಳವನ್ನು ಈ ಪುಟದ ಕೆಳಭಾಗದಲ್ಲಿ ಬರೆಯಿರಿ.

8. ನಿಮ್ಮ ತಂದೆಯ ಹೆಸರು.

9. ಇಲ್ಲಿಯವರೆಗೆ ಓದಿದ ನಂತರ ನಿಮಗೆ ಎಷ್ಟು ಸಾಧ್ಯವೋ. ಅಷ್ಟು ಜೋರಾಗಿ ನಿಮ್ಮ ಹೆಸರನ್ನು ಹೇಳಿರಿ.

10. ಮೇಲೆ ಹೇಳಿದ ಕೆಲಸವನ್ನು ನೀವು ಸರಿಯಾಗಿ ಮಾಡಿದ್ದರೆ ನನಗೆ ಎಲ್ಲಾ ಗೊತ್ತು ಎಂದು ಹೇಳಿರಿ.

11. ಈಗ ಕಣ್ಣನ್ನು ಮುಚ್ಚಿ ಎಡಕೈಯನ್ನು ತಲೆಯ ಮೇಲೆ ಇಡಿ.

12. ನಿಮ್ಮ ಉದ್ಯೋಗವನ್ನು ಇಲ್ಲಿ ಬರೆಯಿರಿ.

13. ಜೋರಾಗಿ 10ರಿಂದ 1ರವರೆಗೆ ಹೇಳುತ್ತಾ ಬನ್ನಿ.

14 ಮೊದಲೇ ಕೆಳಗಿನ ಸಾಲುಗಳನ್ನು ಪೂರ್ತಿ ಓದಿ ನಂತರ ಕೆಳಗೆ ಹೇಳಿದ ಕೆಲಸವನ್ನು ಮಾಡಿರಿ ಎಂದು ಸೂಚಿಸಿದೆ. ಈಗ ನೀವು ಮಾಡಬೇಕಾದ ಕೆಲಸವೇನೆಂದರೆ ಕೇವಲ ಒಂದನೇ ವಾಕ್ಯವನ್ನು ಮತ್ತು ನಾಲ್ಕನೇ ವಾಕ್ಯವನ್ನು ಮಾತ್ರ ಮಾಡುವುದು ಮತ್ತು ಉಳಿದವುಗಳನ್ನು ನಿರ್ಲಕ್ಷಿಸುವುದು.

ಈ ಪರೀಕ್ಷೆಯ ಉದ್ದೇಶವೇನೆಂದರೆ ಕೆಲವರಿಗೆ ಏನಾದರೂ ಕೆಲಸವನ್ನು ನಿರ್ವಹಿಸಲು ಹೇಳಿದಾಗ ಅವರು ಅದನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳದೆ ಯಾವುದು ಮಾಡಬೇಕು ಅದನ್ನು ಬಿಟ್ಟು ಉಳಿದ ಸಣ್ಣ ವಿಷಯಗಳಿಗೆ ಹೆಚ್ಚು ಸಮಯವನ್ನು ವಿನಿಯೋಗಿಸಿ ಏನು ಅವರಿಂದ ಅಪೇಕ್ಷಿಸುತ್ತಾರೋ ಅದನ್ನು ಮಾಡಲು ವಿಫಲರಾಗುತ್ತಾರೆ. ಅಂತಹವರಿಗೆ ಉಪಯೋಗವಾಗಲೆಂದು ಈ ಲೇಖನ. ○

—ಉಳುವಾರನ ಸುರೇಶ್ ಕುಮಾರ್, ಸಿಪ್ಪಾಣಿ

## ತೆಕ್ಕಡ ಕುಟುಂಬಸ್ಥರ ಸಭೆ

ದಿನಾಂಕ 27–3–99 ರಂದು ಮೂರ್ನಾಡು ಗೌಡ ಸಮಾಜದಲ್ಲಿ ತೆಕ್ಕಡ ಕುಟುಂಬಸ್ಥರ ವಿಶೇಷ ಮಹಾಸಭೆ ತೆಕ್ಕಡ ಎ. ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪಟ್ಟೆದಾರ ಲಕ್ಷ್ಮಣರವರು ಉಪಸ್ಥಿತರಿದ್ದರು. ಕುಟುಂಬದ ಹುಸೇವೆ, ಮನೆಸಂಘ, ಐನ್‌ಮನೆಯ ಪುನರಾಭಿವೃದ್ಧಿ ಇವುಗಳು ಹಿಂದಿನ ಸಂಪ್ರದಾಯದಂತೆ ಮುಂದಿನ ತಲೆಮಾರಿಗೆ ರವಾನಿತವಾಗುವ ದೃಷ್ಟಿಕೋನದಲ್ಲಿ ನೂತನ ಸಮಿತಿ ರಚಿತಗೊಂಡಿತು. ಕುಟುಂಬದ ಸದಸ್ಯರು ಕುಟುಂಬ ಹಾಗೂ ಸಂಪ್ರದಾಯದ ಆಚರಣೆಯಲ್ಲಿ ಶ್ರಮಿಸುವುದಾಗಿ ತೀರ್ಮಾನಿಸಿದರು. ಇದು ಈ ತಲೆಮಾರಿನ ಒಂದು ಹೊಸ ಸಾಧನೆ ಹಾಗೂ ಕುಟುಂಬದ ಐಕ್ಯತಾ ಮನೋಭಾವನೆಗೆ ಹಿಡಿದ ಕನ್ನಡಿ.

ವರದಿ ! ತೆಕ್ಕಡ ಬಿ ಕುಮಾರ್.

## ಸಂಚಿಕೆ 8ರ ಪ್ರಕಟಣೆಗೆ ತಿದ್ದುಪಡಿ : ಕರ್ನಲ್ ಪ್ರಭಾಕರ

| ಪುಟ | ಕಾಲಂ | ತಪ್ಪು | ಸರಿ |
|---|---|---|---|
| 4 | 1 | ಸೋದರಮಾವ ಕುದುಪಜೆ ಸುಬ್ಬಯ್ಯ | ಸೋದರಮಾವ ತಿರಗಜೆ ರಾಮಪ್ಪ |
| 4 | 2 | ಜನಾಂಗದಲ್ಲಿಯೇ ಪ್ರಥಮ ಕರ್ನಲ್ | ಜನಾಂಗದಲ್ಲಿ ಎರಡನೇ ಕರ್ನಲ್ |
| 4 | 2 | ಭಾಗಮಂಡಲದ ಕುದುಪಜೆ ಬಸಪ್ಪನವರ ಮಗಳನ್ನು | ಭಾಗಮಂಡಲದ ಕುದುಪಜೆ ಸುಬ್ಬಯ್ಯನವರ ಮಗಳನ್ನು ಎಂದು ಓದಿಕೊಳ್ಳಬೇಕಾಗಿ ವಿನಂತಿ |

## ಮಹಿಳಾ ಮೀಸಲಾತಿ

ಆರ್ಥಿಕವಾಗಿ ಸ್ವಾವಲಂಭಿಗಳಾಗಲು ಮಹಿಳೆಯರು ಗುಡಿ ಕೈಗಾರಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಶಿಕ್ಷಣ ಪಡೆದ ಮಹಿಳೆ ಪ್ರಪಂಚದ ಜ್ಞಾನ ಪಡೆಯುತ್ತಾಳೆ. ಪಟ್ಟಣದ ಮಹಿಳಾ ಸಮಾಜಗಳು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿವೆ. ಅದೇ ಆದರ್ಶವನ್ನು ಗ್ರಾಮಾಂತರ ಪ್ರದೇಶದ ಮಹಿಳೆಯರು ಮಾದರಿಯಾಗಿರಿಸಿಕೊಳ್ಳಬೇಕು. ಮಹಿಳೆಯರು ಸುರಕ್ಷಿತರಾಗಿ ತಮ್ಮ ಹಕ್ಕುಗಳನ್ನು ಪಡೆಯಬೇಕು. ಮಹಿಳೆಯರೆಲ್ಲರೂ ವೈದ್ಯರು, ವಕೀಲರು, ಅಧ್ಯಾಪಕರು ಆಗಲು ಸಾಧ್ಯವಿಲ್ಲ. ಆದರೆ ಅವರವರ ಚೌಕಟ್ಟಿನಲ್ಲಿ ಅವರು ಸುಶಿಕ್ಷಿತರಾಗಿ ಆರ್ಥಿಕವಾಗಿ ಸ್ವಾವಲಂಭಿಗಳಾಗಲು ಪ್ರಯತ್ನಿಸಬೇಕು. ಮಹಿಳೆ ಎಲ್ಲಾ ರಂಗದಲ್ಲಿಯೂ ಸರಿ ಸಮಾನಳಾಗಿ ನಿಲ್ಲಬಲ್ಲಳು. ಭಾರತೀಯ ಮಹಿಳೆಯ ಸಮಸ್ಯೆ ಬೇರೆಯದೇ ಆಗಿದೆ. ಸ್ತ್ರೀ ಸ್ವಾತಂತ್ರ್ಯ ಪುರುಷರನ್ನು ಪೀಡಿಸುವಂತಹದು, ಇಕ್ಕಟ್ಟಿಗೆ ಸಿಕ್ಕಿಸುವಂತಹದು ಆಗಬಾರದು. ವೇದ ಕಾಲದಲ್ಲಿ ಸ್ತ್ರೀ ಸ್ವತಂತ್ರಳಾಗಿದ್ದಳಂತೆ. ಆಸ್ತಿ ಹಕ್ಕು, ಶಿಕ್ಷಣ, ಅಂತ್ಯ ಸಂಸ್ಕಾರದ ಹಕ್ಕು, ಉಪನಯನ ಎಲ್ಲಾ ಇತ್ತಂತೆ. ವೇದದ ಪ್ರಕಾರ ಪಂಡಿತೆಯೂ ಆಗಿದ್ದಳಂತೆ. ಮಹಿಳೆ ಎಂದೂ ಸೇವಕಿ ಎಂಬ ಪದಕ್ಕೆ ಮೀಸಲಾಗಬಾರದು. ಬ್ರಿಟಿಷರು ಬಂದ ನಂತರ ವಿದ್ಯಾಭ್ಯಾಸದ ಫಲವಾಗಿ ಸ್ತ್ರೀವಾದಿ ಚಳುವಳಿ ಆರಂಭವಾಯಿತು. ಸ್ತ್ರೀ ಪುರುಷರು ಪರಸ್ಪರ ಅರ್ಥ ಮಾಡಿಕೊಂಡು ಬದುಕುವುದು ಉತ್ತಮ. ಹೆಣ್ಣು ಭ್ರೂಣ ಹತ್ಯೆಯಂತಹ ಹೇಯ ಕೃತ್ಯವನ್ನು ತಡೆಯಲು ಶ್ರಮಿಸಬೇಕು. ಮಹಿಳೆ ತನಗೆ ದೊರೆತಿರುವ ಶಿಕ್ಷಣ ಉದ್ಯೋಗ ಹಾಗೂ ರಾಜಕೀಯ ಮೀಸಲಾತಿಗಳನ್ನು ಸದುಪಯೋಗ ಮಾಡಿಕೊಳ್ಳಬೇಕು. ಪರಿಸರ ಸಂರಕ್ಷಣೆಯಲ್ಲಿ ಮಹಿಳೆಯರ ಪಾತ್ರ ಪ್ರಾಮುಖ್ಯವಾದದ್ದು. ಪ್ರತಿ ಮಗುವಿನೊಂದಿಗೆ ತಾಯಂದಿರು ಮರವೊಂದನ್ನು ಬೆಳೆಸಬೇಕು. ಯಾವುದೇ ಕ್ಷೇತ್ರದಲ್ಲೂ ಮಹಿಳೆಯರ ಪಾತ್ರ ಮುಖ್ಯವಾದದ್ದು. ಮಕ್ಕಳಿಗೆ ಮೊದಲು ವೈಯಕ್ತಿಕ ಸ್ವಚ್ಛತೆ, ನಂತರ ಸುತ್ತಲಿನ ಪರಿಸರದ ಸ್ವಚ್ಛತೆಯ ಬಗ್ಗೆ ತಾಯಿಯಾದವಳು ಕಲಿಸಬೇಕು. ಎಳೆಯದಲ್ಲಿ ಸ್ವಚ್ಛತೆಯ ಬಗ್ಗೆ ಮೂಡಿಸುವ ಪ್ರಜ್ಞೆ ಕಡೆಯವರೆಗೂ ಇರುತ್ತದೆ. ಮಹಿಳೆಯರು ಎಲ್ಲಾ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ನಿರಂತರ ಶೋಷಣೆಗೆ ಒಳಗಾಗಿದ್ದಾರೆ. ಮಹಿಳೆಯರದೇ ಆದ ರಾಜಕೀಯ ಪಕ್ಷವನ್ನು ಕಟ್ಟಬೇಕು. ಮಹಿಳೆಯರನ್ನು ಮಹಿಳೆಯರೇ ಬೆಂಬಲಿಸದಿರುವುದು, ಉನ್ನತ ಹಾದಿಯತ್ತ ಹೋಗದಂತಹ ಕುತಂತ್ರಗಳು ಮಹಿಳೆಯರಲ್ಲಿರುವುದು ವಿಷಾದಕರ. ಸಂಘಟನೆಯ ಶಕ್ತಿ ಬೆಳೆಸಬೇಕು. ಉತ್ತಮ ಮಹಿಳಾ ನಾಯಕತ್ವವನ್ನು ರೂಪಿಸುವಲ್ಲಿ ಮಹಿಳಾ ಸಂಘಟನೆಗಳು ಮುಂದಾಗಬೇಕು. ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ದಿಢೀರ್ ಬೆಳವಣಿಗೆಯ ಕನಸು ಕಂಡರೆ ಪುರುಷರ ಕೆಟ್ಟ ಆಪಾದನೆಗಳನ್ನು ಎದುರಿಸಬೇಕಾಗುತ್ತದೆ. ಹೋರಾಟದ ಮಾರ್ಗದಲ್ಲಿ ಶ್ರಮ ವಹಿಸಿದರೆ ಶಾಶ್ವತವಾಗಿ ಹೆಸರು ಉಳಿಸಿಕೊಳ್ಳಲು ಸಾಧ್ಯ. ಆಸ್ತಿಯ ಹಕ್ಕಿನಲ್ಲಿ ಬದಲಾವಣೆ ಆಗುವವರೆಗೆ ಮಹಿಳೆಯ ವಿಮೋಚನೆ ಅಸಾಧ್ಯ. ಮಹಿಳೆ ಮತ್ತು ಮೀಸಲಾತಿ ಆಸ್ತಿ ಹಕ್ಕು ನೀಡಿದರೆ ಮಾತ್ರ ಮಹಿಳೆಯ ಸ್ಥಿತಿ ಸುಧಾರಿಸಲು ಸಾಧ್ಯ. ಮಹಿಳೆ ತನ್ನ ದಿನ ನಿತ್ಯದ ಅಲಂಕಾರಕ್ಕಾಗಿ ಸಾಕಷ್ಟು ಹಣ ಖರ್ಚು ಮಾಡಿದರೂ ಸಹ ತನ್ನ ಅಭಿವೃದ್ಧಿ ಹಾಗೂ ಸಮಾಜದ ಹಿತಕ್ಕಾಗಿ ಮಹಿಳಾ ಸಂಘಟನೆಗಳಿಗೆ ಚಂದಾ ನೀಡುತ್ತಿಲ್ಲ. ಹೀಗಾದರೆ ಮಹಿಳಾ ಸಮಾಜದ ಸರ್ವತೋಮುಖ ಅಭಿವೃದ್ಧಿ ಆಗಲು ಹೇಗೆ ಸಾಧ್ಯ? ಮಹಿಳೆ ಸಮಾಜದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ವಿವಿಧ ಯೋಜನೆಗಳ ಲಾಭ ಪಡೆಯಲು ಮುಂದೆ ಬರಬೇಕು. ಮಹಿಳೆ ಅನಕ್ಷರಸ್ಥಳಾದರೆ ಸರಕಾರದ ವಿವಿಧ ಯೋಜನೆಯ ಲಾಭ ಪಡೆಯಲು ಅಸಮರ್ಥಳಾಗುತ್ತಾಳೆ. ನಾವು ಅಬಲೆಯರೆಂದು ಕೀಳರಿಮೆ ಬಿಟ್ಟು ಮಾನಸಿಕವಾಗಿ ಧೈರ್ಯವಂತರಾಗಬೇಕು. ಮಹಿಳೆಯು ಭ್ರಷ್ಟಾಚಾರವನ್ನು ಬಹಿರಂಗಪಡಿಸಲು ಹಿಂಜರಿಯುತ್ತಾಳೆ. ತಮ್ಮ ಮೇಲೆ ಅನಾಚಾರ ಶೋಷಣೆ ನಡೆಯುತ್ತಿದ್ದರು ಹತ್ತಿಕ್ಕುವ ಧೈರ್ಯ ತೋರುತ್ತಿಲ್ಲ. ಇವುಗಳ ವಿರುದ್ಧ ಧ್ವನಿ ಎತ್ತುವ ಹೋರಾಡುವ ಸಾಮರ್ಥ್ಯ ಎಂದು ಬರುವುದಿಲ್ಲವೋ ಅಲ್ಲಿಯವರೆಗೆ ಮಹಿಳೆಯ ಮೇಲೆ ಶೋಷಣೆ ಮುಂದುವರಿಯುತ್ತಿರುತ್ತದೆ.

—ನಾಟೋಳಿನ ದೇವಮ್ಮ ಮೊಣ್ಣಪ್ಪ,
ಗೌಡ ಮಹಿಳಾ ಒಕ್ಕೂಟದ ನಿರ್ದೇಶಕಿ, ಮಡಿಕೇರಿ.

## ಗೆಳೆತನ

ಗೆಳೆತನವೆಂಬುದು ಇಹಲೋಕದ ಅಮೃತ ಬಾಳಿನ ಸಂಜೀವಿನಿ. ಇಲ್ಲಿ ಮೋಸ ವಂಚನೆಗಳಿಗೆ ಎಡೆಯಿಲ್ಲ. ಗರ್ವ ಅಹಂಕಾರಕ್ಕೆ ಸುಳಿವಿಲ್ಲ. ಜೀವನದ ಸುಗಮವಾದ ಮುನ್ನಡೆಗೆ ಗೆಳೆತನವು ಮಾರ್ಗದರ್ಶನದ ಕೈ ದೀವಿಗೆ [ಕೀ]. ಸುಖದಲ್ಲಿ ಅನುಭವಿಸುತ್ತ ದುಃಖದಲ್ಲಿ ಮರುಗುತ್ತ ಕಷ್ಟದಲ್ಲಿ ಸಹ ಭಾಗಿಯಾಗುತ್ತ ಹೆಗಲಿಗೆ ಹೆಗಲು ಕೊಟ್ಟು ನೆರವಿಗೆ ಹಿಂಬಾಲಿಸುವ ಗೆಳತಿ/ಗೆಳೆಯರ ಗೆಳೆತನವು ಯೋಗ್ಯವಾದುದು.

—ಪಾಣತ್ತಲೆ ಲಕ್ಷ್ಮಿ ಶಿವಣ್ಣ, ಸಿಂಗತ್ತೂರು

# ಅರೆಭಾಷಿಕರ ಪ್ರಥಮ ಮಹಿಳಾ ನ್ಯಾಯಾಧೀಶರಾದ ಕು|| ಅಚ್ಚಾಂಡಿರ ನವೀನಕುಮಾರಿ

—ಸಂದರ್ಶನ ಲೇಖನ : **ಪಟ್ಟಡ ಪ್ರಭಾಕರ**

ಹುಲಿಯ ಹಾಲನ್ನುಂಡು, ಬ್ರಿಟಿಷರ ಗುಲಾಮತಿಯನ್ನು ಸಹಿಸದೆ ಭಂಡಾಯವೆದ್ದು ಪ್ರಕೃತಿಯ ಹಂಸರದಿಂದ ತಮ್ಮ ಧೀರ, ಶೂರತನ, ಸಾಹಸಮಯ ಜೀವನಗಳ ಮೂಲಕ ವೀರ ಪರಂಪರೆಯನ್ನು ಹುಟ್ಟು ಹಾಕಿದ ವೀರಜನಾಂಗವೇ ಅರೆ ಭಾಷಿಕ ಗೌಡ ಜನಾಂಗ. ಹಿಂದೆ ಕೊಡಗಿನಲ್ಲಿ ತುಚ್ಛ ನಿಂದನೆಯ ನುಡಿಗಳನ್ನು ಸಹಿಸಲಾರದೆ ತಮ್ಮ ಮಾತೃಭಾಷೆ ಅರೆಭಾಷೆಯನ್ನು ಸಾರ್ವಜನಿಕವಾಗಿ ಮಾತನಾಡಲು ಹಿಂಜರಿಯುತ್ತಿದ್ದ ಆ ಕಾಲದಲ್ಲಿ ಅರೆಭಾಷಿಕರ ಪಾಲಿಗೆ ಸೂರ್ಯನೋಪಾದಿಯಲ್ಲಿ ಜನ್ಮತಳೆದು ಬಂದವರೇ ಶ್ರೀ ನಿಡ್ಯಮಲೆ ಮುದ್ದಪ್ಪನವರು. ಇವರು ಜನಾಂಗದ ಪ್ರಥಮ ನ್ಯಾಯಾಧೀಶರು ಹೌದು. ಅನಂತರದ ದಿನಗಳಲ್ಲಿ ಕರ್ನಾಟಕ ರಾಜ್ಯದ ಕಾನೂನು ತಜ್ಞರಾಗಿ ಬಂದರೂ ಸಹ ಜನಾಂಗದಲ್ಲಿ ನ್ಯಾಯಾಧೀಶರಾಗಿ ಈತನಕ ಯಾರೂ ಬಂದಿಲ್ಲದ ಈ ದಿನದಲ್ಲಿ ಪ್ರಥಮ ಮಹಿಳಾ ನ್ಯಾಯಾಧೀಶರಾದ ಹೆಗ್ಗಳಿಕೆ ಕು|| ಅಚ್ಚಾಂಡಿರ ನವೀನ್ ಕುಮಾರಿಯವರದ್ದು, ಇವರನ್ನು ಸಂಗಾತಿ ಸಂದರ್ಶಿಸಿದಾಗ ಜನಾಂಗದ ಮತ್ತು ಗೌಡ ಮಹಿಳೆಯರ ಬಗ್ಗೆ ಇರುವ ಕಾಳಜಿಯನ್ನು ಗುರುತಿಸಿತು. ಸಂಗಾತಿ ಹೆಮ್ಮೆಯಿಂದ ಓದುಗರಿಗೆ ಪರಿಚಯಿಸುತ್ತಿದೆ.

**ಪ್ರಶ್ನೆ** : ತಮ್ಮ ಮತ್ತು ಮಾತಾ ಪಿತೃಗಳ ಪರಿಚಯ, ಊರು, ಸ್ವಲ್ಪ ತಿಳಿಸುವಿರಾ ?

**ಉತ್ತರ** : ನನ್ನ ಹೆಸರು ನವೀನಕುಮಾರಿ, ಅಚ್ಚಾಂಡಿರ ಮನೆತನ. ಸೋಮವಾರಪೇಟೆ ತಾಲ್ಲೂಕಿನ ನಂಜರಾಯಪಟ್ಟಣ ಗ್ರಾಮ. ತಂದೆ–ಕೆಂಚಪ್ಪ, ತಾಯಿ–ಬೋಜಮ್ಮ.

ಪ್ರಶ್ನೆ : ತಮ್ಮ ವಿದ್ಯಾಭ್ಯಾಸ ಎಲ್ಲೆಲ್ಲಿ ಮಾಡಿದಿರಿ ?

ಉ : ಕೊಡಗು ಮತ್ತು ಮೈಸೂರಿನಲ್ಲಿ ಮಾಡಿದೆ.

ಪ್ರ : ತಮ್ಮ ವಕೀಲ ವೃತ್ತಿಯ ಬಗ್ಗೆ ಸ್ವಲ್ಪ ಪರಿಚಯಿಸಬಲ್ಲಿರಾ ?

ಉ : 1988ರಲ್ಲಿ ವಕೀಲವೃತ್ತಿಯನ್ನು ಆರಂಭಿಸಿ ಅಲ್ಲಿಂದ 1998ರವರೆಗೆ ಶ್ರೀರಂಗಪಟ್ಟಣದಲ್ಲಿ ಮುಂದುವರೆಸಿದೆ. ವಕೀಲ ವೃತ್ತಿಯೊಂದಿಗೆ ಅರೆಕಾಲಿಕ ಉಪನ್ಯಾಸಕಿಯಾಗಿ ಶ್ರೀರಂಗಪಟ್ಟಣ ಸರಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಸೇವೆ ಸಲ್ಲಿಸಿದೆ ಅನಂತರ 1998ರ ಮಾರ್ಚ್ ತಿಂಗಳಿಂದ ಅಪರ ಸಿವಿಲ್ ನ್ಯಾಯಾಧೀಶರಾಗಿ [ಕಿ.ವಿ] ಮತ್ತು ಹೆಚ್ಚುವರಿ ಪ್ರಥಮದರ್ಜೆ ನ್ಯಾಯಿಕ ದಂಡಾಧಿಕಾರಿಯಾಗಿ ಈಗ ನಂಜನಗೂಡಿನಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ.

ಪ್ರ : ಮಹಿಳೆಯರಿಗಾಗಿ ತಾವೇನು ಕೆಲಸ ಮಾಡಿದ್ದೀರಿ?

ಉ : ಹೆಚ್ಚಿಗೆ ಏನೂ ಮಾಡಲಾಗಿಲ್ಲ. ಕಾನೂನಿನ ಅಡಿಯಲ್ಲಿ ಸ್ತ್ರೀಗಾಗಿ ವಿಶೇಷ ಪ್ರಾಧಾನ್ಯತೆ ಕೊಡುವಂತಹ ಅವಕಾಶ ಇಲ್ಲದಿರುವುದರಿಂದ ನಾನು ಆ ಬಗ್ಗೆ ಹೆಚ್ಚು ಯೋಚಿಸಲಿಲ್ಲ. ಆದರೂ ತನ್ನ ಕೈಲಾದ ಸೇವೆ ಮಾಡುವ ಇರಾದೆಯಂತೂ ಇದ್ದೇ ಇದೆ.

ಪ್ರ : ಇಂದಿನ ಯುವಕ ಯುವತಿಯರಿಗೆ ನಿಮ್ಮ ಸೂಕ್ತ ಸಲಹೆ, ಮಾರ್ಗದರ್ಶನವೇನು ?

ಉ : ಯುವ ಪೀಳಿಗೆಯವರು ಹೆಚ್ಚು ವಿದ್ಯಾವಂತರಾಗುವುದು ಮತ್ತು ಸೋಮಾರಿಗಳಾಗದೆ ಸ್ವಾವಲಂಬಿಗಳಾಗಿ ತನ್ನ ಕಾಲ ಮೇಲೆ ತಾವು ನಿಲ್ಲುವುದನ್ನು ಕಲಿಯಬೇಕು.

ಪ್ರ : ಮುಖ್ಯವಾಗಿ ಕೊಡಗು ಗೌಡರ ತಮ್ಮತನ ಸ್ವಂತಿಕೆಯ ಬಗ್ಗೆ ಅಭಿಪ್ರಾಯ ಮತ್ತು ನಿಲುವು ಏನು ?

ಉ : ನಾವು ಕೀಳರಿಮೆಯನ್ನು ಬಿಟ್ಟು ಎಲ್ಲರಂತೆ ನಮ್ಮನ್ನು ನಾವೇ ಗುರುತಿಸಿಕೊಳ್ಳಬೇಕು. ಭಾಷೆ ಮತ್ತು ಸಂಸ್ಕೃತಿ, ಆಚಾರ, ವಿಚಾರ ಯಾವುದನ್ನು ಮರೆಯಬಾರದು. ನಮ್ಮ ಸಂಸ್ಕೃತಿ ದೇಶದ ಅತೀ ದೊಡ್ಡ ಸಂಸ್ಕೃತಿಗಳಲ್ಲೊಂದು ಎಂಬುದನ್ನು ಯಾರೂ ಮರೆಯಬಾರದು.

ಪ್ರ : ಕೊಡಗಿನ ಭಾಗವಾದ ಭಾಗಮಂಡಲ, ಬಿಟ್ಟತ್ತೂರು, ಆನಂದೂರು, ಮದೆ, ಗಾಳಿಬೀಡು, ಸೂರ್ಲಬ್ಬಿ ಈ ಕಡೆ ಜನ ಬಹಳ ಹಿಂದುಳಿದಿದ್ದಾರಲ್ಲ ತಮ್ಮ ಸಲಹೆಯೇನು ?

ಉ : ಈ ಮೇಲಿನ ಊರುಗಳಲ್ಲಿ ಪ್ರಕೃತಿಯ ಹವಮಾನ ವೈಪರೀತ್ಯ ಹಾಗಿದೆ. ಅಭಿವೃದ್ಧಿ ಬಯಸುವ ಬಡವರಿಗೆ ಸಹಕಾರ ಕೊಡುವುದು ಬಹಳ ವಿರಳ ನಮ್ಮ ಜನಾಂಗದಲ್ಲಿ. ಅಸೂಯೆ ಪಡುವುದನ್ನು ಬಿಟ್ಟು ಮುಂದುವರಿಯಲು ಪ್ರಯತ್ನಿಸಬೇಕು ಇಲ್ಲಿ ಶ್ರೀಮಂತರು ಮತ್ತು ವಿದ್ಯಾವಂತರು ಇಲ್ಲ ಎಂದು ಹೇಳಲಾಗುವುದಿಲ್ಲ. ಇಲ್ಲಿ ವಿದ್ಯಾವಂತರೂ, ಮುಂದುವರಿದವರೂ ಇದ್ದಾರೆ. ಆದರೆ ವಿದ್ಯಾವಂತರಾದವರು ಮತ್ತು ಶ್ರೀಮಂತರು ಆ ಗ್ರಾಮ ಬಿಟ್ಟು ಬೇರೆ ಕಡೆ ವಾಸ ಮಾಡು

[ 12ನೇ ಪುಟಕ್ಕೆ ಮುಂದುವರಿದಿದೆ ]

## ಸಂಸ್ಕೃತಿ

ಸಂಸ್ಕೃತಿ ಎಂಬ ಪದ ಕೇಳಿದ್ದೇವೆ. ಅದನ್ನು ಬಳಸುತ್ತೇವೆ. ಆದರೆ ಚೆನ್ನಾಗಿ ಅರಿತುಕೊಂಡವರು ಬಹಳ ಕಡಿಮೆ ಅಥವಾ ವಿರಳ. ಸಂಸ್ಕೃತಿ ಎಂದರೇನು? ನಮ್ಮ ಹುಟ್ಟೇ ಸಂಸ್ಕೃತಿ. ಹಿಂದುಗಳು ಹುಟ್ಟುವುದೇ ಸಂಸ್ಕೃತಿಯಲ್ಲಿ. ಕ್ರೈಸ್ತರು ಮುಹಮ್ಮದೀಯರು ಹುಟ್ಟುತ್ತಾರೆ ಮಾನವರಾಗಿ. ನಂತರ ಅವರು ಕ್ರೈಸ್ತರೋ ಮುಸಲ್ಮಾನರೋ ಆಗುತ್ತಾರೆ. ಆದರೆ ಹಿಂದುಗಳು ಸನಾತನ ಧರ್ಮಾಧಾರಿತವಾಗಿ ಜನಿಸುತ್ತಾರೆ. ನಂತರ ಅವರು ತನಗೆ ತಾನೊಂದು ಹೆಸರಿರಿಸಿಕೊಂಡು ಗುರುತಿಸಿಕೊಳ್ಳುತ್ತಾರೆ. ನಮಗೆ ಸಂಸ್ಕೃತಿ ಬರಬೇಕಾದರೆ ಸಂಸ್ಕರಣೆಯಾಗಬೇಕು. ಚಿನ್ನವನ್ನು ಬಡಿದು ಅಲಂಕಾರಿಕ ಆಭರಣ ಮಾಡಿದರೆ ಅಂದರೆ ಚಿನ್ನವನ್ನು ಸಂಸ್ಕರಿಸಿದರೆ ಅದೊಂದು ಆಭರಣ ಸಂಸ್ಕೃತಿಯಾಗುತ್ತದೆ. ಅದನ್ನು ಉಪಯೋಗಿಸಿದರೆ ಸಂಪ್ರದಾಯವಾಗುವುದು. ಹಾಗೆಯೇ ಸಂಸ್ಕರಣೆ, ಸಂಸ್ಕೃತಿ ಸಂಪ್ರದಾಯ ಬೆಳೆಯಿತು. ಇದು ನಮ್ಮ ಗುಪ್ತಧನ. ಹಳಬರು

ಚೇಂದ್ರಿಮಾಡ ಜಿ. ಮುತ್ತಪ್ಪ, ಕುಶಾಲನಗರ

ನಮ್ಮ ಹಿರಿಯರು ನಮ್ಮ ತಾಯಿ ಕಟ್ಟಿಕೊಟ್ಟ ಬುತ್ತಿ ಬುತ್ತಿಯೆಂದರೆ ಊಟದ ಬುತ್ತಿಯಲ್ಲ ಜೀವನ ನಡೆಸಲು ಕೊಟ್ಟ ಜೀವನಕ್ಕೆ ಆಧಾರವಾದ ಬುತ್ತಿ. ಸಂಸ್ಕೃತಿ ಎಂದರೆ ನಾವು ನಿತ್ಯ ನಡೆಸುವ ಜೀವನ. ಎಂತಾ ಜೀವನ 'ಇನ್ನೊಬ್ಬರಿಗೆ ಸಹಾಯ ಹಸ್ತ ನೀಡು, ಇನ್ನೊಬ್ಬರ ಮನ ನೋಯಿಸದಿರು' ಅದನ್ನೇ ನವೀನ ಕನ್ನಡದಲ್ಲಿ ಹೇಳಬೇಕಾದರೆ 'Hurt Never Help ever' ಎನ್ನುವರು ಇದೇ ನಮ್ಮ ಆಡು ಕನ್ನಡ.

ಸಂಸ್ಕೃತಿ ಬೇಕಾದರೆ ಸಂಸ್ಕರಣೆ ಅಗತ್ಯ. ಸಂಸ್ಕರಣೆಯಿಲ್ಲದೆ ಸಂಸ್ಕೃತಿ ಇಲ್ಲ ಚಿನ್ನದ ಆಭರಣ ಕುತ್ತಿಗೆಯಲ್ಲಿ ಶೋಭಿಸುವುದು. ಅದಕ್ಕೆ ಅಷ್ಟು ಶೋಭೆ ಬರಬೇಕಾದರೆ ಅದೆಷ್ಟು ಪೆಟ್ಟು ತಿಂದಿದೆ, ಎಷ್ಟು ಸಲ ಬೆಂಕಿಯಲ್ಲಿ ಬೆಂದು ಬಳಲಿದೆ? ನಮಗೆ ಒಳ್ಳೆ ಹೆಸರು ಬರಬೇಕಾದರೆ ಮೊದಲು ಜನರು ನಮ್ಮನ್ನು ಅವಮಾನಿಸುತ್ತಾರೆ. ನಂತರ. ನಮ್ಮನ್ನು ಸನ್ಮಾನಿಸುತ್ತಾರೆ. ಸನ್ಮಾನಕ್ಕೆ ತಳಹದಿ ಅವಮಾನ, ನಂತರ ಅನುಮಾನ. ಏಕೆ? ಇದು ಜೀವನದ ರೀತಿ. ಸ್ವಲ್ಪಮಟ್ಟಿಗೆ ನೀತಿಯೂ ಅಹುದು.

ಸಂಸ್ಕೃತಿಗೆ ಪುಸ್ತಕ ವಿದ್ಯೆ ಬೇಕಿಲ್ಲ. ಪುಸ್ತಕ ಜ್ಞಾನ ಬೇಕು. ಇದು ಪುಸ್ತಕದಿಂದ ಬರುವುದಿಲ್ಲ. ಹೃದಯದ

[8ನೇ ಪುಟ ನೋಡಿ]

# ಆರೋಗ್ಯ ಚಿಂತನ:

ಶ್ರೀ

## ರಕ್ತ ಭೇದಿ [ಆಮಶಂಕೆ]

ಭೇದಿಯು ಜೊತೆಗೆ ಸಿಂಬಳ ಮತ್ತು ರಕ್ತವೂ ಹೋಗುತ್ತಿದ್ದಲ್ಲಿ ಅದಕ್ಕೆ ಆಮಶಂಕೆ ಅಥವಾ ರಕ್ತಭೇದಿ ಎನ್ನುತ್ತಾರೆ ಈ ತೊಂದರೆ ಚಿಕ್ಕ ಮಕ್ಕಳಲ್ಲಿ ಹಾಗೂ ದೊಡ್ಡವರಲ್ಲಿ ಆಗೊಮ್ಮೆ ಈಗೊಮ್ಮೆ ಕಾಣಿಸುತ್ತಿರುತ್ತದೆ.

ಈ ರೋಗಕ್ಕೆ ಮುಖ್ಯವಾಗಿ ಅಮೀಬಾ ಎಂಬ ಪರಪುಷ್ಟ ಜೀವಿಯೇ ಕಾರಣ. ರಕ್ತಭೇದಿಯಿಂದ ನರಳುತ್ತಿರುವ ರೋಗಿಯ ಮಲದಲ್ಲಿ ಲಕ್ಷಾಂತರ ಅಮೀಬಾಗಳಿರುತ್ತವೆ. ಇಂತಹ ಮಲದಿಂದ ಕಲ್ಮಶಗೊಂಡಂತಹ ನೀರು, ಆಹಾರಗಳಿಂದ ರೋಗ ಇತರರಿಗೆ ಹರಡುತ್ತದೆ. ಅನೇಕರಲ್ಲಿ ಅಮೀಬಾಗಳು ಇದ್ದರೂ ಅವರಿಗೇನು ಆಗದಿರಬಹುದು. ಆದರೆ ಇಂತಹವರ ಮಲದಿಂದ ಕೂಡ ರೋಗ ಹರಡಬಹುದು.

ರೋಗ ಲಕ್ಷಣಗಳಲ್ಲಿ ರೋಗಿಗೆ ಪದೇ ಪದೇ ಮಲ ವಿಸರ್ಜನೆಗೆ ಹೋಗಬೇಕೆಂದೆನಿಸುತ್ತದೆ. ಹೋದರೆ ಉರಿ ಸಿಂಬಳದಿಂದ ಕೂಡಿದ, ಕೆಲವೊಮ್ಮೆ ರಕ್ತವೂ ಇರುವ ಮಲ ಹೋಗುತ್ತದೆ. ಜೊತೆಗೆ ಹೊಟ್ಟೆಯ ಕೆಳಭಾಗದಲ್ಲಿ ನೋವು ಇರುತ್ತದೆ. ರೋಗ ತೀವ್ರವಾಗಿದ್ದರೆ ದೇಹದಿಂದ ಹೆಚ್ಚು ದ್ರವಾಂಶ ರಕ್ತ ಹೋಗಿ ರೋಗಿ ಅಶಕ್ತನಾಗುತ್ತಾನೆ.

ಬ್ಯಾಕ್ಟೀರಿಯ ಸಹ ರಕ್ತಭೇದಿಯನ್ನು ಉಂಟುಮಾಡಬಹುದು. ಇದು ಒಮ್ಮೆಗೆ ಶುರುವಾಗುತ್ತದೆ. ಜೊತೆಗೆ ಜ್ವರ ಸಹ ಇರುತ್ತದೆ

ಅಮೀಬಾದಿಂದ ಉಂಟಾದ ರಕ್ತಭೇದಿಯ ನಂತರ ಕೆಲವೊಮ್ಮೆ ಕರುಳಿನಿಂದ ಅಮೀಬಾ ಪಿತ್ತಕೋಶವನ್ನು [Liver] ಸೇರಿ ಅಲ್ಲಿ ಕೀವು ತುಂಬಿದ ಹುಣ್ಣು ಮಾಡುತ್ತದೆ ಇದರಿಂದಾಗಿ ಬಲಹೊಟ್ಟೆಯ ಮೇಲ್ಭಾಗದಲ್ಲಿ ವಿಪರೀತ ನೋವು ಕಾಣಿಸಿಕೊಳ್ಳುತ್ತದೆ. ಜೊತೆಗೆ ಜ್ವರ ಸಹ ಇರಬಹುದು. ಮಲ ಪರೀಕ್ಷೆಯಿಂದ ಈ ರೋಗವನ್ನು ಪತ್ತೆಹಚ್ಚಬಹುದು.

ಈ ರೋಗದ ವಿರುದ್ಧ ಯಶಸ್ವಿಯಾಗಿ ಕೆಲಸ ಮಾಡುವ ಔಷಧಗಳಿವೆ. ಮೆಟ್ರೋನಿಡಾಝೋಲ್ [Metranidazole] ಇತ್ಯಾದಿ. ವೈದ್ಯರ ಸಲಹೆಯಂತೆ ಇವನ್ನು ಸೇವಿಸುವುದರಿಂದ ಈ ರೋಗವನ್ನು ಸುಲಭವಾಗಿ ಗುಣಪಡಿಸಬಹುದಾಗಿದೆ. ○

—ಡಾ|| ಎನ್. ಎಸ್. ಪ್ರವೀಣ, [ಎಂ.ಡಿ.]

ಮದೆ, ಮಡಿಕೇರಿ.

## ಗೌಡ ಮಹಿಳಾ ಒಕ್ಕೂಟ, ಕುಶಾಲನಗರ

ವರದಿ : ಅಮ್ಮಾಜಿರ ಧೃತಿ ಪೊನ್ನಪ್ಪ, ಬೆಂಗಳೂರು

ದಿನಾಂಕ 14-4-99ರಂದು ಬೆಳಿಗ್ಗೆ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಆಗಮನವನ್ನು ಗೌಡ ಸಮಾಜ ಮತ್ತು ಮಹಿಳಾ ಒಕ್ಕೂಟವು ಹಾಗೂ ನೆರೆದಿದ್ದ ಜನಸಮೂಹ ಸ್ವಾಗತ ವನ್ನು ಮಾಡಿ ರೂಪಾಯಿ 10001/- ಇತ್ತು ಸನ್ಮಾನಿಸಿತು. 3 ಗಂಟೆಯಿಂದ 6-30ರವರೆಗೆ ಮಹಿಳಾ ಸಮಾಜವು ಒಂದು ವರ್ಷದ ಜನರಲ್‌ಬಾಡಿ ಮೀಟಿಂಗ್ ಅನ್ನು ಏರ್ಪಡಿಸಿದ್ದರು. ಅಧ್ಯಕ್ಷತೆಯನ್ನು ಶ್ರೀಮತಿ ಸೂದನ ರತ್ನಾವತಿಯವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಶ್ರೀಮತಿ ಕೋರನ ಗಂಗಮ್ಮನವರು ಗೌಡ ಅಕಾಡಮಿ ಅಧ್ಯಕ್ಷ ಶ್ರೀ ತುಂತಜ್ಜೀರ ಗಣೇಶ್‌ರವರು, ಕುಶಾಲನಗರ ಗೌಡ ಸಮಾಜ ಅಧ್ಯಕ್ಷ ಶ್ರೀ ಕೋರನ ಪೂಣಚ್ಚನವರು ಬೆಂಗಳೂರಿನ ಕಾವೇರಿನಾಡಿನ ಶ್ರೀ ಅಮ್ಮಾಜಿರ ಪೊನ್ನಪ್ಪನವರು ಉಪಸ್ಥಿತರಿದ್ದರು. ಸೂದನ ಮಾನಸರವರು ಪ್ರಾರ್ಥಿಸಿದರು. ಸ್ವಾಗತ ಜ್ಯೋತಿ ಗೀತೆಯು ನೃತ್ಯ ರೂಪಕವನ್ನು ಅಮ್ಮಾಜಿರ ಧೃತಿ ಪೊನ್ನಪ್ಪನವರಿಂದ ಪ್ರಾರಂಭವಾಯ್ತು. ನಂತರ ವಾರ್ಷಿಕ ವರದಿಯನ್ನು ಬೈಮನ ಬೋಜಮ್ಮನವರು ವಾಚಿಸಿದರು. ಮಹಿಳಾ ಒಕ್ಕೂಟ, ಸಮಾಜ ಹಾಗೂ ಸಂಸ್ಕೃತಿಯ ವಿಷಯವನ್ನು ಮುಂದಾಗಿಟ್ಟು ಶ್ರಮಿಸಬೇಕೆಂದು ಎಲ್ಲರ ಬಿಚ್ಚು ಮನಸ್ಸಿನ ಮಾತಾಗಿತ್ತು. ಆಟೋಟದ ಬಹುಮಾನದ ವಿತರಣೆಯು ತುಂತಜ್ಜೀರ ಗಣೇಶ್‌ರವರು ನಡೆಸಿ ಕೊಟ್ಟರು. ಅಂದು ಎಲ್ಲರು ಸಂಭಾಷಿಸುತ್ತಿದ್ದುದು ಮಾತ್ರ ಕನ್ನಡವನ್ನೇ. ಆದರೆ ತುಂತಜ್ಜೀರ ಗಣೇಶ್ ಮತ್ತು ಅಮ್ಮಾಜೀರ ಪೊನ್ನಪ್ಪನವರ ಅರೆಭಾಷೆಯ ಮಾತು ಮುಂದಕ್ಕೆ ಅರೆಭಾಷೆ ಮಾತಾಡಿಕೆ ಅನುವು ಮಾಡಿಕೊಟ್ಟಿತ್ತು. ಸಂಸ್ಕೃತಿಯ ಉಡುಗೆ ತೊಡುಗೆ ಬಗ್ಗೆ ಕೋರನ ಪೂಣಚ್ಚನವು ಒತ್ತು ಕೊಟ್ಟ್ ಮಾತಾಡ್ದೊ. ಕೋಟು, ಪಂಚೆ, ಕುಪ್ಪಸದಟ್ಟಿಯ ಬಗ್ಗೆ ಪ್ರಶಂಶಿಸಿ ಮುಂದುವರಿಸೋಕುತ ಹೇಳ್‌ದೋ. ಸೂದನ ರತ್ನಾವತಿಯವು ನಾವು ಬಿಚ್ಚು ಮನಸ್ಸಿಂದ, ಮಹಿಳಾ ಒಕ್ಕೂಟವನ್ನು ಮಹಿಳೆಯರ ಹಿತದೃಷ್ಟಿಯಿಂದ ಬ್ಯಾಂಕ್ ಹಾಗೂ ಸಹಕಾರ ರೀತಿಯಲ್ಲಿ ಸಹಕರಿಸುವ ಹಾಗೂ ಮಹಿಳಾ ಸಂಘಟನೆಯನ್ನು ಒಂದು ಒಳ್ಳೆಯ ನಿದರ್ಶನವಾತೆ ನಡೆಸಿ, ನಮ್ಮ ಕೈಲಾದಷ್ಟು ಬ್ಯಾಂಕ್‌ನಲ್ಲಿ ಒದಗುವ ಸಹಕಾರವನ್ನು ಕಲ್ಪಿಸುವೆತ ಹೇಳ್‌ದೊ. ಅದೇ ರೀತಿ ಕಳೆದ ವರ್ಷದ ಕಾರ್ಯಕಾರಿ ಸಮಿತಿಯೇ ಮುಂದುವರಿಯಲಿತ ಎಲ್ಲ ಸದಸ್ಯರ್ ಅಭಿಪ್ರಾಯಪಟ್ರೊ. ವಿದ್ಯಾರ್ಥಿನಿಯರಿಗೆ ಮಹಿಳಾ ಒಕ್ಕೂಟದಿಗಾಗಿ ವಿದ್ಯಾರ್ಥಿವೇತನ ಕೊಟ್ಟದ್ ಒಂದು ಒಳ್ಳೆ ಕಾರ್ಯವಾಗಿತ್. ಮಕ್ಕಳ ಅನಿಸಿಕೆನ ಅವು ಬಂದ್ ತಿಳಿಸಿದ್ದ್ ತುಂಬಾ ಸಂತೋಷದ ವಿಷಯವಾಗಿತ್. ಲೆಕ್ಕ ಪತ್ರ ವರದಿಯನ್ನು ಗುಡ್ಡೆಮನೆ ಮೀನಾ ಆನಂದ ಓದಿದೋ. ಕುಶಾಲನಗರ ಸಮಾಜದಲ್ಲಿ ಸಂಸ್ಕೃತಿ ಮತ್ತು ಸಂಪ್ರದಾಯದ ಆಚರಣೆಗಾಗಿ ಮುಕ್ಕಾಲು ಮಣೆ ಮತ್ತು ಆರತಿ ತಟ್ಟೆ, ಹಸೆ ಬೋರ್ಡ್‌ನ್ನು ಒದಗಿಸಿ, ಸಂಸ್ಕೃತಿಯ ಬಗ್ಗೆ ಮಹಿಳೆಯರು ಮುಂದೆ ಬಂದು ಮದುವೆ ನಡೆಸಿಕೊಡುವಂತಹ ಕಾರ್ಯಕ್ರಮ ಹಮ್ಮಿಕೊಂಡರೆ ಸಂಸ್ಕೃತಿಯು ಮುಂದುವರಿಯುವುದರಲ್ಲಿ ಸಂಶಯವಿಲ್ಲ. ಇದನ್ನು ಮಹಿಳಾ ಒಕ್ಕೂಟವು ಮುಖ್ಯ ಪಾತ್ರವಹಿಸಿ ನಡೆಸಿ ಕೊಡಬೇಕೆಂದು ಅಮ್ಮಾಜಿರ ಪೊನ್ನಪ್ಪನವರು ಕರೆಕೊಟ್ರೊ. ಮತ್ತು ಅಂತ್ಯಾಕ್ಷರಿ ಕಾರ್ಯಕ್ರಮವೊಂದಿಗೆ ಕಾರ್ಯಕ್ರಮ ಮುಗಿಯಿತ್. ವಂದನಾರ್ಪಣೆನ ಕುದುಪಜೆ ಶಾಂತಿ ಬೋಜಪ್ಪನವು ಮಾಡ್ರೊ. ಕುಶಾಲನಗರ ಮಹಿಳಾ ಒಕ್ಕೂಟಕ್ಕೆ ಅಮ್ಮಾಜಿರ ಪೊನ್ನಪ್ಪನವರು 25 ಅರೆಭಾಷೆ ಧ್ವನಿ ಸುರುಳಿಯನ್ನು ಉದಾರವಾಗಿ ನೀಡ್ರೊ. ○

## ಡಾ॥ ಪದ್ಮಾಜಿಯವರಿಗೆ ಮಾತೃವಿಯೋಗ

ದಿನಾಂಕ 20-4-99ರ ಮಂಗಳವಾರದಂದು ಡಾ॥ ಕಾನಡ್ಕ ಪದ್ಮಾಜಿಯವರ ತಾಯಿ ಕಾನಡ್ಕ ಗಂಗಮ್ಮ ಅಣ್ಣಯ್ಯ [75] ಸ್ವರ್ಗಸ್ತರಾದರೆಂದು ತಿಳಿದು ಬಂದಿದೆ. ಇವರು ಪತಿ, ಇಬ್ಬರು ಗಂಡು ಮಕ್ಕಳು, ಆರುಜನ ಹೆಣ್ಣುಮಕ್ಕಳು ಅಲ್ಲದೆ ಅಪಾರ ಮೊಮ್ಮಕ್ಕಳನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಕೊಡಗು ಸಂಗಾತಿ ಸಂತಾಪ ಸೂಚಿಸುತ್ತದೆ.

[ 7ನೇ ಪುಟದಿಂದ ]

ಮೂಲಕ ಬರಬೇಕು. ಅದಕ್ಕೆ ದೈವಬಲ ಬೇಕು. ದೈವ ಬಲ ಒಮ್ಮೆಲೇ ಬರುವುದಿಲ್ಲ. ಪೂಜೆ, ಪುರಸ್ಕಾರ, ದೇವರ ಸ್ತುತಿಯಿಂದ, ಶುದ್ಧ ಮನಸ್ಸಿನಿಂದ ಬರುತ್ತದೆ. ನನಗೆ ದೇವ ರೊಬ್ಬನಿದ್ದಾನೆ. ಅವನು ಒಮ್ಮೆಲೇ ಸಿಕ್ಕುವುದಿಲ್ಲ ಹತ್ತಿ ಹೋಗಬೇಕು. ಹತ್ತಲಿಕ್ಕೆ ಏಣಿ ಬೇಕು. ಆದರ ಮೊಟ್ಟ ಮೊದಲಿನ ಮೆಟ್ಟಿಲು ಹೆತ್ತ ತಾಯಿ, ಎರಡನೇ ಮೆಟ್ಟಿಲು ತಂದೆ, ಮೂರನೇ ಮೆಟ್ಟಿಲು ಬುದ್ಧಿಕಲಿಸಿದ ಗುರು. ಅಂದರೆ ದೇವರ ದಯೆ ಅಥವಾ ಕೃಪೆ ಬೇಕಾದರೆ ಮೊಟ್ಟ ಮೊದಲು ನಾವು ನಮ್ಮ ಹೆತ್ತ ತಾಯಿ, ತಂದೆ, ಗುರುಗಳ ಪಾದಪೂಜೆ ನಿತ್ಯ ಮಾಡಲೇಬೇಕು. ಇದು ಮಾಡದೆ ದೇವರ ಕೋಣೆಯಲ್ಲಿ ಕೂರುವುದು ಮೂರ್ಖತನ. ○

# ಸತ್ತವರ ಶವ ಸಂಸ್ಕಾರ ಮತ್ತು ಅಂತಿಮ ಕ್ರಿಯೆ

ಸತ್ತವನ ಬಾಯಿಗೆ ಪ್ರಪ್ರಥಮವಾಗಿ ಮನೆಯವರು ಕಂಚಿನ ಬಟ್ಟಲಲ್ಲಿ ಬೆಳ್ತಕ್ಕಿ ಶುದ್ಧ ನೀರು, ಅಥವಾ ಎಳನೀರು ಹಾಕಿ ಅದನ್ನು ತುಳಸಿ ಕೊಡಿಯಿಂದ ಸತ್ತವರ ಬಾಯಿಗೆ ನೀರು ಮುಟ್ಟಿಸಿ "ಸ್ವರ್ಗಕ್ಕೆ ಹೋಗು" ಎಂದು ಮನಸಾರೆ ಗಟ್ಟಿಯಾಗಿ ಹೇಳಿ ನೀರು ಬಿಡುವರು. ಊರಿನ ನೆರೆಕರೆಯವರಿಗೆ ತಿಳಿಸುವ ಸಂಕೇತವಾಗಿ ಆಕಾಶಕ್ಕೆ ಜೋಡು ಗುಂಡುಗಳನ್ನು ಹಾರಿಸುವರು. ಮೃತರ ಪ್ರಾಣವನ್ನು ಕೊಂಡೊಯ್ಯಲು ಬಂದ ಯಮದೂತರು ಹೋಗಲು ಮನೆಯ ಮಾಡನ್ನು ತೂತು ಮಾಡಿ ಒನಕೆ ದಾಟಿಸುವರು. ತೆಂಗಿನ ಕಾಯಿ ಒಡೆದು ಇಡುವರು. ಸತ್ತವರ ಶರೀರವನ್ನು ನೇರವಾಗಿ ಇಟ್ಟು ಕೈಕಾಲುಗಳನ್ನು ನೇರಪಡಿಸಿ ಕಣ್ಣುಗಳನ್ನು ಸರಿಯಾಗಿ ಮುಚ್ಚುವಂತೆ ಕೈಯಿಂದ ತೀಡಿ ಸರಿಪಡಿಸಿ ತೆಂಕು ಭಾಗಕ್ಕೆ [ದಕ್ಷಿಣ] ತಲೆಯಿಟ್ಟು ಮಲಗಿಸಿ ಬಿಳಿ ಬಟ್ಟೆಯನ್ನು ಶವದ ಮೇಲೆ ಹಾಕಿ ಒಂದು ದೀವಿಗೆಯನ್ನು ಹಚ್ಚಿ ಇಡುವರು. ಅಲ್ಲದೆ ಶವದ ವಾಸನೆ ಬರದಂತೆ ಮಣ್ಣಿನ ಚಟ್ಟಿ ಯಾ ಮಡಕೆಯಲ್ಲಿ ಬೆಂಕಿ ಹಾಕಿ ಅದಕ್ಕೆ ಗಂಧದ ಚೂಕೆ ಹಾಗೂ ನೆಕ್ಕಿ ಸೊಪ್ಪನ್ನು ಹಾಕಿ ಹೊಗೆ ಕೊಡುವರು. ಗಂಧದ ಕಡ್ಡಿ ಹಚ್ಚಿ ಇಡುವರು. ಸತ್ತವರ ಶವಸಂಸ್ಕಾರವಾಗದೆ ಆ ಮನೆಯವರು ಆಹಾರ ಪಾನೀಯಗಳನ್ನು ಸೇವಿಸಬಾರದು. ನೆರೆ ಕರೆಯವರಿಗೆ, ಊರಿನವರಿಗೆ, ನೆಂಟಿಷ್ಟರಿಗೆ ಸಾವಿನ ಸುದ್ಧಿ ಹೇಳುವ ಕ್ರಮವನ್ನು ತ್ವರಿತಗೊಳಿಸುವರು.

ನೆರೆಯವರು, ಊರಿನವರು, ನೆಂಟರಿಷ್ಟರು ಬಂದ ಕೂಡಲೇ ಎಲ್ಲರೂ ಸೇರಿ ಶವವನ್ನು ಹೊರತೆಗೆದು ಒಂದು ಬೆಂಚಿನ ಮೇಲೆ ಮಲಗಿಸಿ ಎಣ್ಣೆ ಅರಸಿನವನ್ನು ಒಂದು ತೆಂಗಿನ ಚಿಪ್ಪಿಯಲ್ಲಿ ಕಲಸಿ, ಗರಿಕೆ ಹುಲ್ಲಿನಿಂದ ಮೈಗೆ ಲೇಪಿಸಿ, ತೂತು ಚಿಪ್ಪಿಯಿಂದ ನೀರನ್ನು ಮೈಗೆ ಹುಯ್ಯಿದು ಸ್ನಾನ ಮಾಡಿಸುವರು, ಗಡ್ಡ ಮೀಸೆ ಇದ್ದರೆ ಅದನ್ನು ಸಹ ಅಲ್ಲಿಯೇ ತೆಗೆಯುವರು. ನಂತರ ಮಡಿ ಬಟ್ಟೆಯನ್ನು ಹಾಕಿ ಶೃಂಗರಿಸುವರು. ಆದರೆ ಶರ್ಟ್ [ಅಂಗಿ]ನ್ನು ಮಾತ್ರ ಇದಿರು ಭಾಗವನ್ನು ಹಿಂಭಾಗ ಮಾಡಿ ಹಾಕುವರು. ತಲೆಗೆ ಪೇಟ ಕಟ್ಟಿ ಹಣೆಗೆ ಬೊಟ್ಟು ಹಚ್ಚಿ ಕೊರಳಿಗೆ ಹೂಮಾಲೆಯನ್ನು ಹಾಕಿ ಅಲಂಕರಿಸಿ ತಂದು ಮನೆಯ ಕೈಯಾಲೆಯಲ್ಲಿ ಉತ್ತರ ದಕ್ಷಿಣವಾಗಿ ಒಲಿ ಚಾಪೆ ಹಾಕಿ ಅದರ ಮೇಲೆ ಮಲಗಿಸುವುದು. ಮೊದಲು ಮನೆಯವರು ಬಿಳಿ ಬಟ್ಟೆಯನ್ನು ಶವದ ಮೇಲೆ ಹಾಕಿದ ನಂತರ ಊರಿನವರು ನೆಂಟಿಷ್ಟರು ತಂದ ಬಟ್ಟೆಗಳನ್ನು ಹಾಕುವರು. ಹಾಲು ಎಳನೀರು ಮಿಶ್ರಮಾಡಿ ಕಂಚಿನ ಬಟ್ಟಲಲ್ಲಿ ಇಟ್ಟು, ಬಂದವರು ತುಳಸಿಕೊಡಿಯಿಂದ ಶವದ ಬಾಯಿಗೆ ನೀರು ಕೊಟ್ಟು ಹಣ ತಂದವರು ಶವದ ಹಣೆಗೆ ಹಚ್ಚುವರು. ಹಿರಿಯವರು ತಲೆಭಾಗವನ್ನು ಕಿರಿಯರು ಕಾಲನ್ನು ಮುಟ್ಟಿ ನಮಸ್ಕರಿಸುವರು. [ಶವಕ್ಕೆ ಮಾಡುವ ಎಲ್ಲಾ ಕ್ರಮಗಳಲ್ಲಿ ಎಡಗೈಯನ್ನು ಪ್ರದಕ್ಷಿಣೆಯ ಬದಲು ಅಪ್ರದಕ್ಷಿಣೆ ಮಾಡುವುದು.]

ಮೃತನ ಮನೆಯವರು ಕತ್ತಿ, ಮಚ್ಚು, ಕೊಡಲಿ, ಗುದ್ದಲಿ ಇತ್ಯಾದಿಗಳನ್ನು ಮನೆಯ ಅಂಗಳಕ್ಕೆ ತಂದಿಟ್ಟ ನಂತರ ಊರಿನವರು ಕಟ್ಟಿಗೆ ಮಾಡಲು ಹೋಗುವರು. ಕಟ್ಟಿಗೆ ಕಡಿಯಲು ಹೋದಾಗ ಮೊತ್ತ ಮೊದಲು ಕುಂಟೆಗೆ ನಿಲ್ಲುವವನು ಕಟ್ಟಿಗೆಗೆ ಬೇಕಾದ ಮರಕ್ಕೆ ಕಡಿಯಬೇಕು. ತದನಂತರ ಊರಿನವರು ಕಟ್ಟಿಗೆ ಕಡಿಯುವರು. ಅಲ್ಲದೆ ಶವಸಂಸ್ಕಾರ ಮಾಡಲು ಗೊತ್ತುಪಡಿಸಿದ ಸ್ಥಳಕ್ಕೆ ಕಟ್ಟಿಗೆ ತಂದು ಶೇಖರಿಸುವರು. ಶವವನ್ನು ಸುಡಲು ಬೇಕಾಗುವಷ್ಟು ಕಟ್ಟಿಗೆ ಸಂಗ್ರಹವಾದ ನಂತರ ಸ್ಥಳವನ್ನು ಸಮತಟ್ಟುಮಾಡಿ ತೆಂಕು ಬಡಗು [ದಕ್ಷಿಣ, ಉತ್ತರ] ಆಗಿ ಕಾಟ ಒಟ್ಟುವಂತೆಯೂ, ಸೌದೆ ಉರಿಯುವ ಸಮಯದಲ್ಲಿ ಸೌದೆ ಬೀಳದಂತೆ ನಾಲ್ಕು ಹಸಿ ಮರದ ಕಂಬಗಳನ್ನು ಬಲವಾಗಿ ನೆಟ್ಟು (ತಾಕುಕಂಬ)ಉದ್ದಕ್ಕೆ ನಾಲ್ಕು ಅಡಿಯ ಅಂತರದಲ್ಲಿಯೂ, ಅಡ್ಡಕ್ಕೆ ಎರಡು ಅಡಿಯ ಅಂತರದಲ್ಲಿಯೂ ತಾಕುಕಂಬಗಳನ್ನು ನೆಡುವರು. ಅದರ ಮಧ್ಯದಲ್ಲಿ ಶವದ ಉದ್ದಳತೆಗೆ ಸರಿಯಾಗಿ ಕಾಟ ಒಟ್ಟುವರು. ಒಟ್ಟು ಬೇಕಾಗುವ 2/3ನೇ ಭಾಗದಷ್ಟು ಕಟ್ಟಿಗೆಯನ್ನು ಒಟ್ಟಿದ ನಂತರ [ಹಲಸು, ಮಾವು, ಗಂಧ, ಸಡ್ಲೆ ಅಥವಾ ಹಾಲೆ ಮರದ ಸೌದೆಗಳನ್ನು ಶಾಸ್ತ್ರಕ್ಕಾದರೂ ಸ್ವಲ್ಪ ಹಾಕುವರು] ಸ್ವಲ್ಪ ಜನರು ಕಾಟದ ಹತ್ತಿರ ನಿಲ್ಲುವರು. ಉಳಿದವರು ಬಿದಿರಿನ ಚಟ್ಟ ಕಟ್ಟುವುದಕ್ಕೆ ಮನೆಗೆ ಹೋಗುವರು ಎಲ್ಲರೂ ಕಾಟಬಿಟ್ಟು ಹೋಗುವಂತಿಲ್ಲವೆಂದು ಹಿಂದಿನಿಂದಲೂ ನಡೆದು ಬಂದ ಕ್ರಮ. ಹಾಗೇನಾದರೂ ಎಲ್ಲರೂ ಹೋಗುವ ಅವಶ್ಯ ಬಂದಲ್ಲಿ ಒಂದು ಕಲ್ಲು, ಚೂರಿಮುಳ್ಳಿನ ಬಳ್ಳಿಯನ್ನು ಕಾಟದ ಮೇಲಿಟ್ಟು ಹೋಗುವರು. ಕಲ್ಲು ಚೂರಿಮುಳ್ಳಿನ ಬಳ್ಳಿಯನ್ನು ಕಾಟದ ಮೇಲೆ ಇಡುವ ಕ್ರಮವೇಕೆಂದರೆ ಹಿಂದೊಮ್ಮೆ ಒಂದು ಶವದ ಮನೆಯಲ್ಲಿ ಶವಸಂಸ್ಕಾರಕ್ಕಾಗಿ ಎಲ್ಲಾ ಏರ್ಪಾಡುಗಳನ್ನು ಮಾಡಿ ಸೌದೆ ಒಡೆದು ಅಡಿಕಾಟ ಒಟ್ಟಿ ಅದರ ಮೇಲೆ ಯಾವ ವಸ್ತುವನ್ನು ಇಡದೆ ಎಲ್ಲರೂ ಮನೆಗೆ ಬಂದರಂತೆ ಪದ್ಧತಿಯಂತೆ ಶವವನ್ನು ಬಿದಿರಿನ ಚಟ್ಟದಲ್ಲಿಟ್ಟು ಹೊತ್ತುಕೊಂಡು

(11ನೇ ಪುಟಕ್ಕೆ ಮುಂದುವರೆದಿದೆ)



○ ಕೌಂಡಿನ್ಯ

ಧಾರಾವಾಹಿ-5

ಬಂಗಲೆಯ ಹಾಲ್! ಬಾಗಿಲಿನ ಹತ್ತಿರ ರೇವತಿ ಸೂಟ್‌ಕೇಸ್ ಅನ್ನು ಹಿಡಿದುಕೊಂಡು ಹೊರಟು ನಿಂತಿದ್ದಾಳೆ. ಪ್ರಸನ್ನ ಹತ್ತಿರ ಬಂದನು.

ನಗು ಮುಖದ ಚೆಲುವ!

ರೇವತಿಯ ಮೈ ಝುಂ ಎಂದಿತು ಈ ಚೆಲುವ ಮದುವೆಯ ಗಂಡು! ಅವನು ತನ್ನನ್ನು ಒಪ್ಪಿದ್ದಾನೆ!

ಕಣ್ಣುಗಳಲ್ಲಿ ಮಾದಕತೆ ಇದೆ!

ರೇವತಿ ಅವನ ನೋಟ ಎದುರಿಸಲಾರದೆ ತಲೆ ತಗ್ಗಿಸಿದಳು. ನಾನೇಕೆ...ನಾನೇಕೆ ಸೋಲುತ್ತಿದ್ದೇನೆ!

ಪ್ರಸನ್ನ ನಗುತ್ತಲೇ 'ಈಗಲೇ ನಿಮ್ಮ ಅಭಿಪ್ರಾಯ ಹೇಳಿ ಅಂತ ಒತ್ತಾಯ ಮಾಡಲಾರೆ. ಆದರೆ ನನ್ನ ಆತಿಥ್ಯವನ್ನು ಸ್ವೀಕರಿಸಿ ಹೋಗಬಹುದಲ್ಲ.'

ರೇವತಿ ನಗುತ್ತಲೇ ತಲೆಯಾಡಿಸಿದಳು. ಪ್ರಸನ್ನನ ಅಣ್ಣಂದಿರು, ಅಪ್ಪ ಅದು ಯಾವ ಗಳಿಗೆಯಲ್ಲಿ ರೂಮುಗಳನ್ನು ಸೇರಿ ಕೊಂಡಿದ್ದರೋ ಗೊತ್ತಿಲ್ಲ!

ಪ್ರಸನ್ನ ಅವಳು ವಿಶ್ರಾಂತಿ ಪಡೆದ ನಂತರ ತಾನೇ ಅವಳ ಜೊತೆ ಬಂದು ಬಂಗಲೆಯನ್ನು ತೋರಿಸಿದನು.

ಹತ್ತು ರೂಮುಗಳು! ಪ್ರತಿಯೊಂದು ರೂಮಿನಲ್ಲೂ ಸಹ ಫೈವ್‌ಸ್ಟಾರ್ ಹೋಟೆಲ್ ಅನ್ನು ನೆನಪಿಗೆ ತರುವಂತಹ ಅನ ಭವಗಳು!

ಪ್ರಸನ್ನನ ಬೆಡ್ ರೂಮು!

ಅವನ ರಸಿಕತೆಯ ಪ್ರತೀಕದಂತೆ ಇತ್ತು! ಅದಕ್ಕೆ ಹೊಂದಿಕೊಂಡಂತೆ ಮತ್ತೊಂದು ಸೀಕ್ರೆಟ್ ಚೇಂಬರ್ ಇತ್ತು. ಅದು ಐರನ್ ಚೇಂಬರ್!

ಸ್ವಿಚ್ ಅದುಮಿದನು.

ವಾಲ್ ಡೋರ್ ತೆರೆದುಕೊಂಡಿತು!

ಅಲ್ಲಿ...ಅಲ್ಲಿತ್ತು ಐರನ್ ಸೇಫ್ ಲಾಕರ್! ಪ್ರಸನ್ನ ಅದನ್ನು ತೆರೆದು ತೋರಿಸಿದನು. ಅದರ ತುಂಬಾ ನೋಟಿನ ಕಂತೆಗಳು ತುಂಬಿತ್ತು!

ಮತ್ತೊಂದು ಕಡೆ ಡೈಮಂಡ್ಸ್!

ಚಿನ್ನದ ಆಭರಣಗಳು!

ಮಬ್ಬು ಬೆಳಕಿನಲ್ಲಿ ಹೊಳೆಯುತ್ತಿದೆ!

ರೇವತಿ ಕಣ್ಣಿನ ರೆಪ್ಪೆ ಸಹ ಅಡಿಸದೆ ಅವು ಗಳನ್ನೆಲ್ಲಾ ನೋಡುತ್ತಿದ್ದಾಳೆ. ಪ್ರಸನ್ನ ನಗುತ್ತಾ ಹತ್ತಿರ ಬಂದನು

ಅವನ ನಗುವಿನಲ್ಲಿ ಮಾದಕತೆ ಇದೆ!

ರೇವತಿ ಸೋಲುತ್ತಿದ್ದಾಳೆ.

ಪ್ರಸನ್ನ ನಗುತ್ತಲೇ 'ನೀವು ಒಪ್ಪಿ ಕೊಂಡು ಈ ಬಡವನ ಮೇಲೆ ಕೃಪೆ ತೋರಿ ಸಿದರೆ ಈ ಮಹಾ ಐಶ್ವರ್ಯಕ್ಕೆ ಇನ್ನು ಮುಂದೆ ಮಹಾರಾಣಿಯಾಗುತ್ತೀರ.'

ರೇವತಿ ಬೆಚ್ಚಿಬಿದ್ದು ನೋಡಿದಳು ಅರೆ ...ಅರೆ...ಇವನು ಹೇಳುತ್ತಿರುವುದಾದರೂ ಏನು? ಈ ಎಲ್ಲಾ ಶ್ರೀಮಂತಿಕೆ ತನ್ನದು ಮಾತ್ರ ಎಂದು ಪರೋಕ್ಷವಾಗಿ ತಿಳಿಸು ತ್ತಿದ್ದಾನೆ. ಇವನ ಅಣ್ಣಂದಿರಿಗೆ ಪಾಲು ಇಲ್ಲವೆ!

'ನನ್ನ ಅಣ್ಣಂದಿರ ಬಗ್ಗೆ ಚಿಂತಿಸು ತ್ತಿದ್ದೀರಾ?'

ರೇವತಿ ಬೆಚ್ಚಿಬಿದ್ದಳು. ಮೈಂಡ್ ಮತ್ತು ಥಾಟ್ ರೀಡಿಂಗ್ ಗೊತ್ತಿರುವುದೆ? ನನ್ನ ಆಲೋಚನೆ ಹೇಗೆ ಗ್ರಹಿಸಿದ!

ರೇವತಿ ಅನುಮಾನದಿಂದ ನೋಡಿದಳು.

ಪ್ರಸನ್ನ 'ಇದು ನನ್ನ ಸಂಪಾದನೆ. ವಯಸ್ಸು ಬಂದಿದ್ದರೂ ಸಹ ಬುದ್ಧಿ ಸರಿ ಯಿಲ್ಲದ ನನ್ನ ಅಣ್ಣಂದಿರನ್ನು ನಾನು ಚಿಕ್ಕ ಮಕ್ಕಳಂತೆ ಸಾಕುತ್ತಿದ್ದೇನೆ' ಎಂದನು.

ರೇವತಿಗೆ ಇನ್ನೊಂದು ಶಾಕ್!

ಇವನ ಅಣ್ಣಂದಿರಿಗೆ ತಲೆ ಸರಿ ಇಲ್ಲ!

ಅಕ್ಕನ ಗಂಡ ದೊಡ್ಡ ಹುಚ್ಚ!

ಶ್ರೀಮಂತಿಕೆಯ ದರ್ಪ ತೋರಿಸುತ್ತಾ ಮಹಾಗಾಂಭೀರ್ಯದಿಂದ ಕುಳಿತಿದ್ದ ಅರುಂಧತಿ ಹೇಗೆ!

ಅವಳಿಗೆ ತಲೆ ಸರಿ ಇದೆ ತಾನೆ? ರೇವತಿಗೆ ಅದೇ ಊರಿನಲ್ಲಿರುವ ತನ್ನ ಗೆಳತಿ ಮೀನಳ ನೆನಪಾಯಿತು. ಏಕೋ ಅವಳನ್ನು ನೋಡಬೇಕು ಅನಿಸುತ್ತಿದೆ.

ಮೀನಳ ಹತ್ತಿರ ಮಾತಾಡಬೇಕು!

ಇಲ್ಲಿಯವರೆಗೆ... ........

ಸಂಪಿಗೆ ಪುರದ ಎಡತೊರೆಯ ಶ್ರೀಮಂತರ ಮನೆಯಲ್ಲಿ ವಿಚಿತ್ರ ವ್ಯಕ್ತಿಗಳ ಪರಿಚಯ ರೇವತಿಗೆ ಆಗುತ್ತದೆ. ಪ್ರಸನ್ನನ ಇಬ್ಬರು ಅಣ್ಣಂದಿರು ಮಂಕು ಬಡಿದವರಂತೆ ಕುಳಿತಿರುತ್ತಾರೆ. ಅಕ್ಕನ ಗಂಡನಿಗೆ ಹುಚ್ಚು. ರೇವತಿಗೆ ಗೊಂದಲ ಸುಂದರ ಯುವಕ ಪ್ರಸನ್ನನೇ ಮದುವೆಯ ಗಂಡು ಅಂತ ಗೊತ್ತಾದಾಗ ಅವಳಿಗೆ ತುಂಬಾ ಸಂತೋಷವಾಗುತ್ತದೆ

ಮುಂದೆ ಓದಿ... ......

ಆಗ ಮತ್ತಷ್ಟು ಸಂಗತಿ ತಿಳಿಯುತ್ತೆ! ಪ್ರಸನ್ನ ಅವಳ ಮುಖದ ಹತ್ತಿರ ಬಂದನು. ಅವನ ಬಿಸಿಯುಸಿರು ಇವಳ ರೇಶಿಮೆ ಕೆನ್ನೆಯ ಮೇಲೆ ಬಿದ್ದು ಪುಳಕ ಉಂಟು ಮಾಡುತ್ತಿದೆ.

'ರೇವತಿ' ಎಂದು ಪಿಸುಗುಟ್ಟಿದನು.

ರೇವತಿ ಅವನತ್ತ ತಿರುಗಿದಳು.

ಪ್ರಸನ್ನ 'ರೇವತಿ...ನನ್ನನ್ನು ಮದುವೆಯಾಗಲು ನಿನಗೆ ಒಪ್ಪಿಗೆ ಇದೆಯೆ ?' ಎಂದು ಕೇಳಿದನು.

ರೇವತಿ ಅವನ ನೋಟವನ್ನು ಎದುರಿಸಲಾರದೆ ತಲೆ ತಗ್ಗಿಸಿದಳು. ತಾನೆಲ್ಲಿ ಅವನಿಗೆ ಸೋತು ಬಿಡುತ್ತೇನೋ ಎಂಬ ಭಯ! ರೇವತಿಗೆ ಗೊತ್ತಿರಲಿಲ್ಲ !

ಅವಳು ಅವನಿಂದ ಆಕರ್ಷಿತಳಾಗಿದ್ದಳು! ರೇವತಿ ಅವನಿಂದ ದೂರ ಸರಿಯುತ್ತಾ, 'ಪ್ಲೀಸ್...ಈಗಲೇ ನನ್ನನ್ನು ಒತ್ತಾಯ ಮಾಡಬೇಡಿ. ನನ್ನ ನಿರ್ಧಾರವನ್ನು ನಾಳೆ ತಿಳಿಸುತ್ತೇನೆ.'

ರೇವತಿ ಇವನನ್ನು ತಿರಸ್ಕರಿಸಿರಲಿಲ್ಲ !

ಆದರೆ ಅದೇನೋ ಗೊಂದಲ ಅನುಮಾನ! ಅದೇ ಊರಿನಲ್ಲಿರುವ ಗೆಳತಿ ಮೀನಳನ್ನು ಈ ಮನೆತನದ ಬಗ್ಗೆ ಮತ್ತು ಪ್ರಸನ್ನನ ಬಗ್ಗೆ ಕೇಳಬೇಕೆಂಬ ಕಾತುರ ಅವಳಿಗೆ !

ಅವನ ಮುಖ ಅರಳಿತು !

70 ಎಂ ಎಂ ಸಿನಿಮಾ ಪರದೆಯಂತೆ !

'ಪ್ರಸನ್ನ ಅಂದರೆ...ಅಂದರೆ ..ನೀವು ಇವತ್ತು ಇಲ್ಲೇ ಉಳಿಯುತ್ತೀರ' ಎಂದು ಸಂತೋಷ ಸಡಗರದಿಂದ ಕೇಳಿದನು.

ರೇವತಿ ನಗುತ್ತಾ ತಲೆಯಾಡಿಸಿದಳು.

'ನಿನ್ನ...ಹಾಗಾದರೆ ರೂಮಿನ ವ್ಯವಸ್ಥೆ ಮಾಡುತ್ತೇನೆ' ಎಂದು ಅವಳ ಕೈಯಲ್ಲಿದ್ದ ಸೂಟ್‌ಕೇಸ್ ಅನ್ನು ಎತ್ತಿಕೊಂಡನು.

ರೇವತಿ ಗಾಬರಿಯಾದಳು.

'ನಾನು ಇಲ್ಲಿ ಉಳಿದುಕೊಳ್ಳುವುದಿಲ್ಲ'

ಪ್ರಸನ್ನ ನಗುತ್ತಾ 'ಈ ಊರಿನಲ್ಲಿ ಇನ್ನೆಲ್ಲಿ ಉಳಿಯಲು ಸಾಧ್ಯ! ಈ ಕುಗ್ರಾಮದಲ್ಲಿ ಮೈಸೂರಿನ ತರಹ ಲಾಡ್ಜ್ ಇಲ್ಲ.'

'ನನಗೆ ಅದರ ಅಗತ್ಯ ಇಲ್ಲ.

'ಹಾಗಾದರೆ ಇನ್ನೆಲ್ಲಿ ಉಳಿಯುತ್ತೀರ!'

'ನನ್ನ ಫ್ರೆಂಡ್ ಮನೆಯಲ್ಲಿ.'

ಪ್ರಸನ್ನ ತುಸು ಗಾಬರಿಯಿಂದ 'ನಿಮಗೆ ಇಲ್ಲಿ ಫ್ರೆಂಡ್ ಇದ್ದಾರ? ಅಂತಹ ಫ್ರೆಂಡ್ ಯಾರು ?'

'ಅವಳ ಹೆಸರು ಮೀನ ಅಂತ. ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ನಾವಿಬ್ಬರು ಒಟ್ಟಿಗೇ ಓದಿದ್ದೇವೆ.

ಮೀನ ಎಂಬ ಹೆಸರನ್ನು ಕೇಳಿದ ಕೂಡಲೇ ಪ್ರಸನ್ನನ ಮುಖ ಬಿಳುಚಿಕೊಂಡಿತು, ಗಾಬರಿಯಾದನು.

ರೇವತಿ ಇದನ್ನು ಗಮನಿಸಿದಳು.

'ಮೀನಳ ಮನೆಗೆ ಕರೆದುಕೊಂಡು ಹೋಗಲು ನನಗೆ ಹೆಲ್ಪ್ ಮಾಡುತ್ತೀರ ಪ್ರಸನ್ನ ?'

ಗಾಢವಾಗಿ ಚಿಂತಿಸುತ್ತಿದ್ದ ಪ್ರಸನ್ನ ಬೆಚ್ಚಿಬಿದ್ದು 'ಹುಂ ಹುಂ' ಆಗಲಿ...ಕೆಲಸದವನಿಗೆ ಹೇಳಿದರೆ ಮನೆ ತೋರಿಸುತ್ತಾನೆ ಎಂದನು ಗಾಬರಿಯಿಂದ.

ಎಲ್ಲೋ...ಏನೋ ಅನುಮಾನ! ಮೀನಳ ಹೆಸರನ್ನು ಹೇಳಿದ ಕೂಡಲೇ ಈ ಪ್ರಸನ್ನ ಯಾಕೆ ಈ ರೀತಿ ಬದಲಾದ ?

ಸಮ್‌ಥಿಂಗ್ ಈಸ್ ರಾಂಗ್ !

ಏನದು......!? [ಸಶೇಷ]

## ಸುಂದರಿ

ಓ ಸುಂದರಿ
ಚಂದಿರ ಚಕೋರಿ
ನಿನ್ನ ಕಂಗಳ ಕಾಂತಿಗೆ
ನನ್ನ ಮನ ಸೋತಿದೆ
ಅದಕ್ಕೆ ಹೇಳುತ್ತಿದೆ ನನ್ನ ಮನಸ್ಸು
ನಿನ್ನ ಕಣ್ಣುಗಳು ಕಾಣದ ಹಾಗೆ
ಹಾಕು ಕೂಲಿಂಗ್ ಗ್ಲಾಸ್

—ಮನೋಜ್ ಕೊಲ್ಯದ ಮನೆ,
ಬೆಂಗಳೂರು.

## ಅಧ್ಯಕ್ಷರಾಗಿ ಡಿ.ಬಿ. ಬಾಲಕೃಷ್ಣ ಆಯ್ಕೆ

ಸಂಪಾಜೆ, ಚೆಂಬು, ಪೆರಾಜೆ ಗ್ರಾಮಗಳ ಕಾರ್ಯವ್ಯಾಪ್ತಿಯಲ್ಲಿರುವ ಪಯಸ್ವಿನಿ ವ್ಯವಸಾಯ ಸೇವಾ ಸಹಕಾರ ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಮಡಿಕೇರಿ ತಾಲ್ಲೂಕು ಪಂಚಾಯ್ತಿಯ ಮಾಜಿ ಅಧ್ಯಕ್ಷರಾದ ಶ್ರೀ ಡಿ. ಬಿ. ಬಾಲಕೃಷ್ಣಗೌಡ ಪೆರಾಜೆಯವರು ಅವಿರೋಧವಾಗಿ ಆಯ್ಕೆಯಾದರು. ಉಳಿದಂತೆ ಬಾಲಚಂದ್ರ ಕೆ. ವಿ. ಸಂಪಾಜೆ, ಸುಬ್ರಮಣ್ಯ ಉಪಾಧ್ಯಾಯ ಚೆಂಬು, ಪದ್ಮಾವತಿ ಎ. ಕೆ. ಚೆಂಬು, ಲೋಕನಾಥ್ ಅಮೆಚೂರ್ ಪೆರಾಜೆ, ನಾಗೇಶ್ ಕುಂದಲ್ಪಾಡಿ ಪೆರಾಜೆ, ಸೀತಾರಾಮ ಪೆರಾಜೆ, ಸೋಮಪ್ಪ ಪೆರಾಜೆ ಇವರುಗಳು ನಿರ್ದೇಶಕರುಗಳಾಗಿ ನೇಮಕಗೊಂಡಿದ್ದಾರೆ.

ವರದಿ : ಎಂ. ಆರ್. ಗೋಪಾಲ್,
ಪೆರಾಜೆ.

[ 6ನೇ ಪುಟದಿಂದ ]

ಸ್ಮಶಾನಕ್ಕೆ ಹೋದರಂತೆ. ಅಲ್ಲಿಗೆ ಹೋಗುವಷ್ಟರಲ್ಲಿ ಇವರು ಒಟ್ಟಿಟ್ಟ ಕಾಟದ ಸುತ್ತಲೂ ವಿಚಿತ್ರ ಆಕಾರದ ಭೂತಗಳು ಕುಣಿಯುತ್ತಿದ್ದುವಂತೆ. ಈ ಭೂತಗಳನ್ನು ಕಂಡು ಜನರು ಗಾಬರಿಗೊಂಡಾಗ ಆ ಭೂತಗಳು ಇವರನ್ನು ಕಂಡು ಓಡಿದವಂತೆ. ಆದರೆ ಈ ಶವದ ಭೂತವು ನಿಂತು ಜನರ ಕಡೆ ನೋಡಿ 'ಒಟ್ಟಿದ ಕಾಟದ ಸೌದೆಯ ಮೇಲೆ ಕಲ್ಲು, ಚೂರಿಮುಳ್ಳನ್ನಾದರೂ ಇಟ್ಟು ಹೋಗಬೇಕೆಂದು ಹೇಳಿ ಮಾಯವಾಯಿತಂತೆ.' ಅಂದಿನಿಂದ ಕಾಟದ ಮೇಲೆ ಕಲ್ಲು, ಚೂರಿಮುಳ್ಳನ್ನು ಇಡುವ ಕ್ರಮ ಬಂತೆಂದು ಹಿರಿಯರು ಹೇಳುತ್ತಾರೆ.

ಕೃಪೆ : ಗೌಡ ಸಂಸ್ಕೃ-, ಮಡಿಕೇರಿ

## ಪ್ರಥಮ ಮಹಿಳಾ ನ್ಯಾಯಾಧೀಶರಾದ ಕು|| ಅಚ್ಚಾಂಡಿರ ನವೀನಕುಮಾರಿ

[ 6ನೇ ಪುಟದಿಂದ ಮುಂದುವರಿದುದು]

ವುದರಿಂದ ಆ ಗ್ರಾಮದ ಅಭಿವೃದ್ಧಿಗಾಗಿ ಯೋಚಿಸುವವರಾಗಲಿ ಯಾರೂ ಇಲ್ಲದಿರುವುದೇ ಈ ಮೇಲಿನ ಗ್ರಾಮಗಳು ಹಿಂದುಳಿಯಲು ಮುಖ್ಯ ಕಾರಣ. ಅಲ್ಲದೆ ಈ ರೀತಿಯ ಸಮಸ್ಯೆ ಕೇವಲ ಕೊಡಗಿಗೆ ಮಾತ್ರ ಸೀಮಿತವಲ್ಲ. ಆದ್ದರಿಂದ ಆಯಾ ಗ್ರಾಮದಲ್ಲಿ ಹುಟ್ಟಿದವರು ತಮ್ಮ ಗ್ರಾಮದ ಏಳಿಗೆ ಬಗ್ಗೆ ಹೆಚ್ಚು ಗಮನ ಹರಿಸಿದರೆ ಖಂಡಿತ ಅಭಿವೃದ್ಧಿ ಸಾಧ್ಯ

ಪ್ರ : ನಮ್ಮವರಲ್ಲಿ ಕೆಲವು ಮಂದಿ ಮಾತ್ರ ಶ್ರೀಮಂತ ವ್ಯಕ್ತಿಗಳಿದ್ದರೂ ಅವರಲ್ಲಿ ಹೆಚ್ಚಿನ ಮಂದಿ ಸೇವಾ ಮನೋಭಾವದಿಂದ ದೂರವಿದ್ದಾರಲ್ಲ? ಅವರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉ : ಶ್ರೀಮಂತ ವ್ಯಕ್ತಿಗಳಿಂದ ಮಾತ್ರ ಸೇವಾ ಮನೋಭಾವ ಅಪೇಕ್ಷಿಸುವುದು ಸರಿಯಲ್ಲ. ಕಾರಣ ಶ್ರೀಮಂತರಾದವರಿಗೆ ಸೇವಾ ಮನೋಭಾವ ಇರುತ್ತದೆಂದು ಹೇಳಲು ಸಾಧ್ಯವಿಲ್ಲ. ಬಡವನಲ್ಲೂ ಸೇವಾ ಮನೋಭಾವವಿರುತ್ತದೆ ಸೇವಾ ಮನೋಭಾವ ಇರುವವರೆ ನಿಜವಾದ ಶ್ರೀಮಂತರು.

ಪ್ರ : ನಮ್ಮ ಸಮಾಜದ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಉ : ನಮ್ಮ ಸಮಾಜ ಮುಂದುವರೆದ ಸಮಾಜವಾಗಿದೆ. ಆದರೆ ಸ್ವಾರ್ಥ ಬಿಟ್ಟು ಮುಂದುವರೆಯುವವರಿಗೆ ಪ್ರೋತ್ಸಾಹ, ಉತ್ತೇಜನ ನೀಡಬೇಕು. ಹೆಚ್ಚಿನ ರೀತಿಯಲ್ಲಿ ಬಡ ವಿದ್ಯಾರ್ಥಿಗಳಿಗೆ ಧನ ಸಹಾಯ ಮಾಡುವಂತಹ ಯೋಜನೆಗಳನ್ನು ಸಮಾಜ ರೂಪಿಸಿಕೊಳ್ಳಬೇಕು.

ಪ್ರ : ವರದಕ್ಷಿಣೆಯ ಬಗ್ಗೆ ತಾವೇನು ಹೇಳುತ್ತೀರಿ ?

ಉ : ವರದಕ್ಷಿಣೆ ನಮ್ಮ ಜಿಲ್ಲೆಯಲ್ಲಿ ಕಡಿಮೆ ಎಂದೇ ಹೇಳಬೇಕು. ವರದಕ್ಷಿಣೆ ಒಂದು ಪಿಡುಗಾದರೂ ಇದನ್ನು ತಡೆಗಟ್ಟಲೆಂದೇ ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಸಮಪಾಲು ಮಾಡಿರುವುದು. ಆದರೆ ಇನ್ನು ಆ ಪಿಡುಗು ಬಗೆಹರಿಯಲಿಲ್ಲ. ವರದಕ್ಷಿಣೆ ಕೊಡುವುದಿಲ್ಲ ಎಂಬುದರ ಬದಲಾಗಿ ವರದಕ್ಷಿಣೆ ಪಡೆದುಕೊಳ್ಳುವುದಿಲ್ಲ ಎನ್ನುವ ಘೋಷಣೆ ಯುವಕರಲ್ಲಿ ಬರಬೇಕು.

ಪ್ರ : ಅಂತರ್‌ಜಾತಿ ವಿವಾಹಕ್ಕೆ ನಿಮ್ಮ ಸಮ್ಮತಿ ಮತ್ತು ಅಭಿಪ್ರಾಯವೇನು ?

ಅಂತರ್‌ಜಾತಿ ವಿವಾಹಕ್ಕೆ ನನ್ನ ಪ್ರೋತ್ಸಾಹವಿದೆ. ಅದು ತಪ್ಪು ಎಂದು ಹೇಳಲು ಸಾಧ್ಯವಿಲ್ಲ.

ಪ್ರ : ಈ ಹಿಂದೆ ಸೂಜಿ, ಗೌಡ ಧ್ವನಿ ಪತ್ರಿಕೆ ಬಂದಿತು. ಈಗ "ಕೊಡಗು ಸಂಗಾತಿ" ಸಮಾಜದ ಹಿತವನ್ನು ಬಯಸಿ ಬಂದಿದೆ. ಈ ಬಗ್ಗೆ ತಮ್ಮ ನಿಲುವು ಅಭಿಪ್ರಾಯವೇನು ?

'ಸೂಜಿ' ಮತ್ತು 'ಗೌಡಧ್ವನಿ' ಬಗ್ಗೆ ನನಗೇನು ತಿಳಿಯದು. ಆದರೆ 'ಕೊಡಗು ಸಂಗಾತಿ' ಕೇವಲ ಅರೆಭಾಷೆಗೆ ಮಾತ್ರ ಸೀಮಿತವಾಗಿರದೆ ಕೊಡಗು ನಾಡಿಗೆ ಸೀಮಿತವಾದರೆ ಇನ್ನು ಹೆಚ್ಚು ಪ್ರಸಿದ್ಧಿಯಾಗುವುದರಲ್ಲಿ ಯಾವ ಸಂದೇಹ ಪಡಬೇಕಾಗಿಲ್ಲ.

ಮುಕ್ತ ಮನಸ್ಸಿನಿಂದ ಮಾತನಾಡಿ ಸಾಕಷ್ಟು ಜನಾಂಗದ ಬಗ್ಗೆ ಕಳಕಳಿಯಿರುವ ನವೀನ್‌ಕುಮಾರಿಯವರ ಜೀವನದ ಆಶೋತ್ತರಗಳೆಲ್ಲ ನೆರವೇರಲಿ. ಅಲ್ಲಿಗೆ ಕುಲಗುರು ವೆಂಕಟರಮಣನ ಆಶೀರ್ವಾದವಿರಲಿ ಎಂಬುದನ್ನು ಸಂಗಾತಿ ಹರಸುತ್ತಾ ನಮ್ಮನ್ನು ನಗುಮುಖದಿಂದ ಬೀಳ್ಕೊಟ್ಟಾಗ ಸಂಗಾತಿಗೆ ಏನೋ ಒಂದು ತರಹದ ಹೆಮ್ಮೆ ಎನಿಸಿತು. ○

## ಚುನಾವಣೆ

ಬರುತಿದೆ ಮಹಾ ಚುನಾವಣೆ

ಬಲು ಬೇಗನೆ ಬಂದಿದೆ ಮರು ಚುನಾವಣೆ
ಈ ಬಾರಿ ಮಧ್ಯಕಾಲಿಕ ಚುನಾವಣೆ
ತಂದಿದೆ ಜನಸಾಮಾನ್ಯರಿಗೆ ಬವಣೆ
ಅಭ್ಯರ್ಥಿಗಳು ಮಾಡುವರು ನೂರಾರು ಘೋಷಣೆ
ಅಧಿಕಾರ ಗಿಟ್ಟಿಸಿಕೊಳ್ಳಲು ಮಾಡುವರು ಘರ್ಷಣೆ
ವ್ಯಯ ಮಾಡುವರು ಕೋಟಿಗಟ್ಟಲೆ ಹಣ
ಓಟು ಪಡೆಯಲು ಮಾಡುವರು ಹಲವಾರು ಯೋಜನೆ
ಬರಿದು ಮಾಡುವರು ದೇಶದ ಖಜಾನೆ
ಗದ್ದುಗೆ ಏರುವ ಮುನ್ನ ಮಾಡುವರು ಪ್ರತಿಜ್ಞೆ
ಅರಿಸಿ ಬಂದವರು ಮಾಡುವರು ಜನರ ಶೋಷಣೆ
ಇದೋ ಬರುತ್ತಿದೆ ಮಹಾ ಚುನಾವಣೆ

—ಮಣ್ಣಂಡ್ರ ಜಿ. ಜಯಕುಮಾರ್,
ಬೆಂಗಳೂರು.

## ಮುತ್ತಾರ್ಮುಡಿ ಶ್ರೀ ಭದ್ರಕಾಳಿ ದೇವಿಯ ವಾರ್ಷಿಕ ಉತ್ಸವ

ಮಾರ್ಚ್ 31ರಿಂದ ಏಪ್ರಿಲ್ 2ರ ತನಕ ಮೂರು ದಿನಗಳ ಮುತ್ತಾರ್ಮುಡಿ ಶ್ರೀ ಭದ್ರಕಾಳಿ ದೇವಿಯ ವಾರ್ಷಿಕ ಉತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ಮುತ್ತಾರ್ಮುಡಿಯ ಶ್ರೀ ಭದ್ರಕಾಳಿಯ ದೇವಾಲಯವು ಶತಮಾನದ ಹಿಂದಿನ ಚರಿತ್ರೆಯನ್ನು ಹೊಂದಿರುವ ದೇವಾಲಯವಾಗಿದೆ. ಸುಮಾರು 75 ವರ್ಷಗಳ ಹಿಂದೆ [ಅಂದಾಜು] ಕೆಲವು ದ್ರೋಹಿಗಳ ಕುಮ್ಮಕ್ಕಿನಿಂದ ದೇವಾಲಯವು ಸಂಪೂರ್ಣವಾಗಿ ನಾಶ ಹೊಂದಿತು. ಮುತ್ತಾರ್ಮುಡಿ ಗ್ರಾಮವು ದೇವಾಲಯವಿಲ್ಲದ ಒಂದು ಗ್ರಾಮವಾಗಿ ಬಹಳಷ್ಟು ಕಾಲ ಉಳಿದಿತ್ತು. ಯಾವುದೇ ದೈವಿಕ ಆತ್ಮ ಶಾಂತಿ, ಹಣ್ಣು ಕಾಯಿ ಮಾಡಬೇಕಾದರೆ ಹೊರ ದೇವಾಲಯಗಳಿಗೆ ಹೋಗಬೇಕಾಗಿತ್ತು. ಇವೆಲ್ಲವನ್ನು ಮನಗಂಡ ಊರಿನ ಹಿರಿಯರು ದೇವಿಯ ಭಕ್ತಿವುಳ್ಳವರು, ಸಮಾಜ ಸೇವಕರು ಒಂದು ಸಮಿತಿಯನ್ನು ರಚಿಸಿಕೊಂಡು ದೇವಾಲಯದ ಜೀರ್ಣೋದ್ಧಾರಕ್ಕಾಗಿ ಪರಿಶ್ರಮಿಸಿತು. ಇವರ ಪರಿಶ್ರಮದ ಫಲ, ಊರಿನವರ ಸಹಕಾರ, ಧಾನಿಗಳ ಕೊಡುಗೆಯಿಂದ ಈ ಮುತ್ತಾರ್ಮುಡಿಯಲ್ಲಿ ದೇವಾಲಯವು ಜೀರ್ಣೋದ್ಧಾರಗೊಂಡು ಈ ವರ್ಷ ನಾಲ್ಕನೇ ವರ್ಷದ ದೇವಿಯ ಉತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸಿತು. ಲಕ್ಷ ರೂಪಾಯಿಯ ವೆಚ್ಚದಲ್ಲಿ ಕಾಳೇಕಾಟ್ ತಂತ್ರಿಜೀಯವರಿಂದ ಮುತ್ತಾರ್ಮುಡಿ ಶ್ರೀ ಭದ್ರಕಾಳಿ ದೇವಾಲಯವು ಜೀರ್ಣೋದ್ಧಾರಗೊಂಡಿತು. ಸುಮಾರು 35 ಎಕರೆ ದೇವಿಯ ವಿಹಾರ ಕಾಡು ಈಗ ಊರಿನವರದೆ ಕಾಫಿ ತೋಟವಾಗಿ ನಿಂತಿದೆ. ಈಗ ಕೆಲವೇ ಕೆಲವು ಎಕರೆ ಉಳಿದಿದೆ ಶ್ರೀ ಭದ್ರಕಾಳಿ ದೇವಿಯು ಚಾಮುಂಡಿ ಗುಳಿಗ, ನಾಗ, ಬೇಟೆ ಅಯ್ಯಪ್ಪ ಎಂಬ ಉಪ ದೇವತೆಗಳನ್ನು ಹೊಂದಿದ್ದು, ಅವುಗಳ ಸ್ಥಾನಗಳು ಕೆಲವು ಜಮೀನ್ದಾರರ ಸ್ವಾಧೀನದಲ್ಲಿದ್ದು ಆ ಜಮೀನಿನ ಬಿಡುಗಡೆಗೊಂಡ ನಂತರ ಅವುಗಳು ಜೀರ್ಣೋದ್ಧಾರ ಆಗಬೇಕಾಗಿದೆ. ಮುಂದಿನ ವರ್ಷ ಅವುಗಳೆಲ್ಲ ಬಿಡುಗಡೆಗೊಂಡು ಇನ್ನಷ್ಟು ದೈವಿಕ ಶಕ್ತಿ ಹೆಚ್ಚುವುದೆಂದು ಈ ವರ್ಷ ದೇವಿಯು ಆಶ್ವಾಸನೆಯನ್ನು ನೀಡಿದ್ದಾಳೆ. ಹಲವು ವರ್ಷಗಳಿಂದ ನೆರಳಿಲ್ಲದ ನೆಲದಂತೆ, ತಾಯಿಲ್ಲದ ತಬ್ಬಲಿಯಂತೆ ಇದ್ದ ಮುತ್ತಾರ್ಮುಡಿ ಗ್ರಾಮವನ್ನು ಭದ್ರಕಾಳಿ ತಾಯಿಯು ಈಗ ನೆರಳಾಗಿ, ತಾಯಿಯಾಗಿ ಗ್ರಾಮವನ್ನು ಗ್ರಾಮಸ್ಥರನ್ನು ರಕ್ಷಿಸುತ್ತಿರುವಳು ಈ ವರ್ಷವೂ ಕಾಳೇಕಾಟ್ ತಂತ್ರಿಜಿಯವರಿಂದಲೇ ವಾರ್ಷಿಕ ಉತ್ಸವವು ನಡೆಯಿತು ಈ ವರ್ಷ ಸಾವಿರಾರೂ ಭಕ್ತಾದಿಗಳು ಊರಿನಿಂದ ಹಾಗೂ ಪರ ಊರಿನಿಂದ ಬಂದು ದೇವಿಯ ಉತ್ಸವದಲ್ಲಿ ಪಾಲ್ಗೊಂಡು ಪ್ರಸಾದವನ್ನು ಸ್ವೀಕರಿಸಿದರು. ಸುಮಾರು 14,200 ರೂಪಾಯಿಯ ಭಂಡಾರವು ಈ ವರ್ಷ ಬಿದ್ದಿತ್ತು. ಶ್ರೀ ಭದ್ರಕಾಳಿಯ ಉತ್ಸವವು ಕೇರಳ ಶೈಲಿಯಲ್ಲಿ ನಡೆಯುತ್ತಿದೆ. ಕೇರಳದ ವಿಶೇಷ ಚೆಂಡೆ ಮದ್ದಳವು ಜನರನ್ನು ಆಕರ್ಷಿಸುತ್ತಿದೆ. ಇದು ಜನರಲ್ಲಿ ಒಂದು ರೀತಿಯ ಭಕ್ತಿ ಹಾಗೂ ಭಯವನ್ನು ಹುಟ್ಟಿಸುವಂತದಾಗಿದೆ. ಶ್ರೀ ಭದ್ರಕಾಳಿ ದೇವಾಲಯವು ಕೊಡಗಿನಲ್ಲಿ ಒಂದು ವಿಶೇಷ ದೇವಾಲಯವಾಗುವ ಭವಿಷ್ಯವನ್ನು ಹೊಂದಿದೆ.

ಈ ವರ್ಷ ಕೊಡೆಕಲ್ಲು ವಿಶ್ವನಾಥನವರ ಮೇಲ್ವಿಚಾರಣೆಯಲ್ಲಿ ಬಹಳ ಶಿಸ್ತಿನಿಂದ, ನಿಯಮ ಬದ್ಧವಾಗಿ ಉತ್ಸವವು ನಡೆಯಿತು. ಯಾವುದೇ ಘರ್ಷಣೆ, ವೈಯಕ್ತಿಕ ದ್ವೇಷಾ ಮನೋಭಾವನೆಯಿಲ್ಲದೆ ಶಾಂತಿಯಿಂದ ಭಕ್ತಾದಿಗಳು ಉತ್ಸವದಲ್ಲಿ ಪಾಲ್ಗೊಂಡಿದ್ದರು. ಈ ವರ್ಷ ಕಾರ್ಯಕ್ರಮವನ್ನು ಶಾಂತ ರೀತಿಯಿಂದ ವೀಕ್ಷಿಸಿ, ದೇವಿಯ ದರ್ಶನವನ್ನು ಪಡೆಯುವಂತೆ, ಪ್ರಸಾದವನ್ನು ತೆಗೆದುಕೊಳ್ಳುವಂತೆ ವ್ಯವಸ್ಥೆ ಮಾಡಲಾಗಿತ್ತು. ಉತ್ಸವದ ಸಮಿತಿಯನ್ನು ರಚಿಸಿ ಅವರಲ್ಲಿ ಕಾರ್ಯಕರ್ತರು ಹಗಲಿರುಳೆನ್ನದೆ ಬಹಳ ಶ್ರಮದಿಂದ ವ್ಯವಸ್ಥಿತವಾಗಿ ನಡೆಯುವಂತೆ ಮಾಡಿದ್ದಾರೆ. ಇದೇ ರೀತಿ ಮುಂದಿನ ಶತ ಶತಮಾನಗಳವರೆಗೆ ದೇವಾಲಯದ ಕಾರ್ಯ ಕಲಾಪ, ಉತ್ಸವ ಮುಂದುವರಿಯಲಿ ಗ್ರಾಮಸ್ಥರ, ಆಡಳಿತ ಸಮಿತಿಯ ಹೊಂದಾಣಿಕೆಯ ಮನೋಭಾವನೆ, ದೈವಿಕ ಮನೋಭಾವನೆ ಲವಲವಿಕೆಯಿಂದ ಕೂಡಿರಲಿ. ಅವರೆಲ್ಲರ ಪರಿಶ್ರಮಕ್ಕೆ ದೇವಿಯ ಅನುಗ್ರಹವಿರಲಿ ನಾಡಿನಾದ್ಯಂತ ಭಕ್ತಾದಿಗಳನ್ನು ತನ್ನೆಡೆಗೆ ಬರಮಾಡಿ, ದೇವಿಯು ಆಶೀರ್ವಚನವನ್ನು ನೀಡಲಿ. ಭಕ್ತಾದಿಗಳು ಬಂದು ದೇವಿಯ ದರ್ಶನವನ್ನು ಪಡೆದು ಕೃತಾರ್ಥರಾಗುವಂತೆ ವಿನಂತಿ.

ವರದಿ : ತೆಕ್ಕಡೆ ಬಿ ಕುಮಾರ್, ಮುತ್ತಾರ್ಮುಡಿ

### -: ನಗೆ ಹನಿ :-

[ ಹದಿನೈದು ದಿನ ಕಳೆದರೂ ವಾಪಸ್ ಹೋಗುವ ಸುದ್ಧಿ ಎತ್ತದ ಅತಿಥಿಗೆ ] : 'ಏನಯ್ಯಾ ಇಷ್ಟು ದಿನವಾದ್ರೂ ನಿನ್ನ ಹೆಂಡ್ತಿ–ಮಕ್ಕಳನ್ನು ನೋಡಬೇಕೂಂತ ಅನ್ನಿಸಲ್ವೇನಯ್ಯಾ ನಿನಗೆ ?'

ಅತಿಥಿ : 'ಹಾಂ ! ಹೌದ್ದಾದು, ನೆನಪಿಸಿದ್ದು ಒಳ್ಳೆದಾಯ್ತು. ಇವತ್ತೇ ಟೆಲಿಗ್ರಾಂ ಕೊಡ್ತೀನಿ, ನೀವೂನೂ ಬಂದ್ ಬಿಡಿ ಅಂತ'.

# ಕೊಡಗು ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಶ್ರೀ ಬಾಲಗಂಗಾಧರನಾಥ ಸ್ವಾಮಿಜಿಯವರಿಂದ ಭರವಸೆ



ಇದೇ ಏಪ್ರಿಲ್ ತಿಂಗಳ ಮೊದಲ ಪಾಕ್ಷಿಕದಲ್ಲಿ ಶ್ರೀ ಚುಂಚನಗಿರಿ ಮಠಾಧೀಶರಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರಿಂದ ವಿದ್ಯಾಸಂಸ್ಥೆಗಳ ಸ್ಥಾಪನೆ ಮತ್ತು ಬೆಳವಣಿಗೆಯ ಗುರಿ ಹೊತ್ತು ಕೊಡಗಿನ ಸೋಮವಾರಪೇಟೆ ಮತ್ತು ಮಡಿಕೇರಿ ತಾಲ್ಲೂಕುಗಳಲ್ಲಿ ಪ್ರವಾಸವನ್ನು ಪ್ರಾರಂಭಿಸಿದ್ದರು. ಸ್ವಾಮೀಜಿಯವರ ಆಗಮನದಿಂದ ಇಡೀ ಕೊಡಗುನಾಡೆ ಮೊದಲನೋಟಕ್ಕೆ ಪುಳಕಿತಗೊಂಡ ಅನುಭವ. ಸ್ವಾಮೀಜಿಯವರು ತಮ್ಮ ಕಾರ್ಯಕ್ರಮದಲ್ಲಿ ಸೋಮವಾರಪೇಟೆ ತಲ್ತರೆ ಶೆಟ್ಟಳ್ಳಿ, ಸುಂಟಿಕೊಪ್ಪ, ಕುಶಾಲನಗರ, ವಾಲ್ನೂರು, ನಂಜರಾಯಪಟ್ನ, ಭಾಗಮಂಡಲ, ತಲಕಾವೇರಿ, ಮರಗೋಡು ಹಾಗೂ ಇನ್ನಿತರ ಸ್ಥಳಗಳಿಗೆ ಭೇಟಿಕೊಟ್ಟು ಆಶೀರ್ವಚನ ನೀಡಿ ಹರಸಿದರು

ಕೊಡಗಿನಲ್ಲಿ ವೃದ್ಧರ ಪಾಲನೆಗಾಗಿ ವೃದ್ಧಾಶ್ರಮ, ಅನಾಥರ ರಕ್ಷಣೆಗಾಗಿ ಅನಾಥಾಶ್ರಮಗಳನ್ನು ಸ್ಥಾಪಿಸುವ ಗುರಿಯನ್ನು ಸ್ವಾಮೀಜಿಯವರು ವ್ಯಕ್ತಪಡಿಸಿದ್ದಾರೆ. ಅಲ್ಲದೆ ಉನ್ನತ ಮಟ್ಟದ ತಾಂತ್ರಿಕ ಶಿಕ್ಷಣವನ್ನು ಕೊಡಗಿನ ಗ್ರಾಮಾಂತರ ವಿಭಾಗದ ಮಕ್ಕಳು ಕಲಿಯಲು ವಿಶೇಷ ಅವಕಾಶಕ್ಕಾಗಿ ಯಾವುದೇ ಡೊನೇಷನ್ ಇಲ್ಲದೆ ಕೇವಲ ವಿದ್ಯಾರ್ಥಿ ಶುಲ್ಕವನ್ನು ಮಾತ್ರ ಪಾವತಿಸಿದರೆ ಕಲಿಸುವ ಭರವಸೆ ನೀಡಿದರು. ತಮ್ಮ ವಿದ್ಯಾಸಂಸ್ಥೆಯಲ್ಲಿ ಕೊಡಗು ಜಿಲ್ಲೆಯ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ 100 ಸ್ಥಾನಗಳನ್ನು ಮೀಸಲಿಡುವುದಾಗಿ ಮಠಾಧೀಶರು ಭರವಸೆ ನೀಡಿದ್ದಾರೆ.

ಭಾಗಮಂಡಲ ಮತ್ತು ಮರಗೋಡಿನಲ್ಲಿ ಅಭೂತಪೂರ್ವ ಸ್ವಾಗತ ದೊರೆಯಿತಲ್ಲದೆ ಸ್ವಾಮೀಜಿಯವರು ನೆರೆದ ಸಾವಿರಾರು ಭಕ್ತಾದಿಗಳಿಗೆ ಆಶೀರ್ವಚನ ನೀಡಿ ಶುಭ ಹಾರೈಸಿದ್ದಾರೆ. ○

—ಸಂಗಾತಿ ವರದಿ.

## ಪಾತ್ರೆಗಳ ಆಟ

ಬೆಳ್ಳನೆ ಹುಣ್ಣಿಮೆ ರಾತ್ರಿಯಲಿ
ಭಟ್ಟರ ಅಡುಗೆಯ ಕೋಣೆಯಲಿ
ಬಕೇಟ್ ಬಿಂದಿಗೆ ಡಬ್ಬಗಳು
ಬೋಗುಣಿ ತಂಬಿಗೆ ಸೌಟುಗಳು
ಲೊಚ ಲೊಚ ಮಾತನು ಆಡಿದವು
ಏನೋ ನಿರ್ಣಯ ಮಾಡಿದವು
ಮೆಲ್ಲಗೆ ಬಾಗಿಲು ದೂಡಿದವು
ಕಣ್ಣನೆ ಹೊರಗಡೆ ಓಡಿದವು
ಆಡುತ ಹಾಡುತ ಬಯಲಲ್ಲಿ
ಕುಣಿಯುತ ನಲಿದವು ಖುಷಿಯಲ್ಲಿ
ಸಾಗಿತು ಸಮಯವು ಭರದಿಂದ
ಕುಳಿತವು ಒಂದೆಡೆ ದಣಿವಿಂದ
ಭಟ್ಟರು ಏಳುವ ಹೊತ್ತಾಯ್ತು
ಮನೆಯನು ಸೇರುವ ನೆನಪಾಯ್ತು
ಚಕಚಕ ಜಿಗಿಯುತ ಸಾಗಿದವು
ಅಡುಗೆಯ ಕೋಣೆಗೆ ನುಗ್ಗಿದವು.

—ಕೆ. ಎ ಶಿವಪ್ಪ, ಗಾಳಿಬೀಡು.

## ಭಕ್ತಿ

ದೇಶ ಭಕ್ತಿ
ಪ್ರಜೆಗಳ ಶಕ್ತಿ
ದೇವರ ಭಕ್ತಿ
ದಯದಿಂದ ಮುಕ್ತಿ
ದುಡಿಮೆಯ ಶಕ್ತಿ
ಉದರಕ್ಕೆ ಪ್ರಾಪ್ತಿ
ದೇಹದ ಶಕ್ತಿ
ನೋಟಕ್ಕೆ ಸೂಕ್ತಿ
ಪ್ರೇಮಿಗಳ ಯುಕ್ತಿ
ಕಂಕಣ ವಿಮುಕ್ತಿ.

—ಆಜಡ್ಕ ರಾಣಿ ಬಾಲಕೃಷ್ಣ,
ಕುಶಾಲನಗರ.

## ಸ್ನೇಹಿತರು

ಜೀವನವೆಂಬ
ಮರಳುಗಾಡಿನಲ್ಲಿ
ಅಲ್ಲೊಮ್ಮೆ ಇಲ್ಲೊಮ್ಮೆ
ಇಣುಕು ಹಾಕುವ
ಓಯಸಿಸ್‌ಗಳು.

## ಸ್ನೇಹ

ಮನ ಮನಗಳ
ಬೆಸೆಯುವ
ಬಲವಾದ
ಕೊಂಡಿ.

## ನೀರಸ

ಜೀವನದಲ್ಲಿ ಇರಲೇ
ಬೇಕು ಸರಸ ವಿರಸ
ಇವಿಲ್ಲದಿದ್ದರೆ ಬದುಕು
ಬರೀ ನೀರಸ !

—ಕುಯಿಂತೋಡು ಸ್ಮಿತಾ ಅಮೃತರಾಜ್
ಸಂಪಾಜೆ.

ಅರೆ ಭಾಷೆರ ವಿಭಾಗ

# ಸಹಸ್ರವೀರ್ಯದ ಅದ್ಭುತಗಳು

ಒಂದ್ 5–6 ತಿಂಗಳ ಹಿಂದೆ ನಾನೂ ನನ್ನ ಫ್ರೆಂಡ್ಸ್ ಆರೇಳ್ ಜನ ಸೇರಿ ಪಿಕ್‌ನಿಕ್‌ಗೆ ಹೋದ್. ನನ್ನ ಫ್ರೆಂಡ್ ಒಬ್ಬನ ಜೀಪ್‌ಲಿ ಊರಾಚೆ ಇದ್ದ ಫಾರಂ ಹೌಸ್‌ಗೆ ಹೋಕೆ 1 ಗಂಟೆ ಹಿಡ್ದದೆ. ಅಂದ್ ಮಧ್ಯಾಹ್ನ ಊಟಕೆ ಮುಂದೆ ವಾಲಿಬಾಲ್ ಆಡಿಕಂಡ್ ಕಾಲ ಕಳ್ದೊ. ಬೇಲಿಂದ ಹೊರಗೆ ಹಾರಿ ಹೋದ ವಾಲಿಬಾಲ್‌ನ ತಾಕೆ ನನ್ನ ಫ್ರೆಂಡ್ ಒಬ್ಬ ಹೋತ್. ಅಂವ ಜೋರಾಗಿ ಕಿರ್ಚಿಕಂಡ ಸದ್ದ್ ಕೇಳಿ ನಾವೆಲ್ಲ ಹೆದ್ರಿ ಓಡಿ ಹೋಗಿ ನೋಡ್ರೆ ಸುಮಾರ್ 4 ಅಡಿ ಉದ್ದದ ಹಾವು ಸರಸರತ ಗಿಡಗಳ ಸಂದಿಲಿ ಮರೆಯಾತ್. ನನ್ನ ಫ್ರೆಂಡ್ ನೆಲಲಿ ಬಿದ್ದ್‌ಕಂಡ್ ಬ್ಯಾನೆಲಿ ನರಳ್ತಾ ಇತ್ತ್. ನಾವ್ ಅವನ ಕಾಲ್‌ಲಿ ಆದ ಗಾಯಂದ ಸ್ವಲ್ಪ ಮೇಲೆ ಒಂದು ಕರ್ಚೀಫ್‌ನ ಗಟ್ಟಿಯಾಗಿ ಕಟ್ಟಿದೊ. ಅವನ ಕರ್ಕಂಡ್ ಬಂದ್ ನೆರಳ್‌ಲಿ ಕೂರ್ಸಿದೊ. ಮುಂದೆ ಎಂತ ಮಾಡೊಕುತ ಗೊತ್ತಾಗದೆ ತಬ್ಬಿಬ್ಬಾದೊ. ಯಾಕೆತೇಳ್ರೆ ಸುತ್ತ ಮುತ್ತ ಮೈಲಿಗಳವರೆಗೆ ಯಾವ ಆಸ್ಪತ್ರೆನೂ ಇಲ್ಲೆ. ಅಷ್ಟೊತ್ತಿಗೆ ಅಲ್ಲಿ ತೋಟ ನೋಡಿಕಣುವ ಮಾಲಿ ಅಲ್ಲಿ ಒಂದ್ ಫರ್ಲಾಂಗ್ ದೂರಲಿ ಒಬ್ಬ ನಾಡ್‌ವೈದ್ಯ ಉಟ್ಟುತ ಹೇಳ್ತ್. ಇಮಿಡಿಯಟ್ ಆಗಿ ನನ್ನ ಫ್ರೆಂಡ್ ಮಾಲಿನ ಜೀಪ್‌ಲಿ ಕೂರ್ಸಿಕಂಡ್ ವೈದ್ಯನ ಕರ್ಕಂಡ್ ಬಾಕೆ ಹೋರ್ಟತ್. ನಾವೆಲ್ಲಾ ವೈದ್ಯ ಮನೇಲೇ ಇರುವಂಗೆ ಆಗಿ, ನಮ್ಮ ಫ್ರೆಂಡ್‌ದ್ ಪ್ರಾಣಕ್ಕೆ ಏನೂ ಹಾನಿ ಆಗದೆ ಇರ್ಲಿ ದೇವ್ರೇತ ಬೇಡಿಕಂಡೊ. ಅವಂಗೇನಾದ್ರೂ ಆಗಿ ಬುಟ್ರೆ, ಅವನ ಮನೆಯವ್ಕೆ ನಾವೆಲ್ಲ ಹೆಂಗೆ ಮುಖ ತೋರ್ಸುದು ಹೇಳಿ ?

ಹಾವ್ ಕಚ್ಚಿದವ್ಕೆ ಮಂಪರ್ ನಿದ್ರೆ ಬಂದದೆ, ಅವರ್ನ ನಿದ್ರಿಸಿಕೆ ಬುಡ್‌ಕಾಗದ್‌ತ ನಾನ್ ಎಲ್ಲೊ ಓದಿದ್ದ ನೆನಪು. ಅದ್ಕೆ ಅವನ ಆದ್ ಇದ್ ಮಾತಾಡಿಸ್ಕಂಡ್ ಧೈರ್ಯ ಹೇಳಿ ಕಂಡ್ ಕಾಲ ತಳ್ಳಿದೊ. ಒಂದೊಂದು ನಿಮಿಷನೂ ಒಂದೊಂದು ಯುಗಗಳಂಗೆ ಕಳ್ತ್. 10 ನಿಮಿಷದ ಒಳಗೆ ಜೀಪ್ ದೂಳೆಬ್ಬಿಸಿ ಕಂಡ್ ಬಾತ್. ಅದೃಷ್ಟವಶಾತ್ ವೈದ್ಯ ಜೊತೇಲೇ ಬಂದಿತ್ತ್.

ಅಂವ ಬಂದಂಗೆ ದೇವರ್ನ ಗ್ಯಾನ ಮಾಡಿ ಕೈ ಮುಗ್ದ್ ಅವನ ಜೋಳಿಗೆಂದ ಒಂದು ಹಸ್ರ್ ಕಲರ್ ಬಾಟ್ಲಿನ ಹೊರಗೆ ತೆಗ್ದ್ ಒಂದು ಬಾಟ್ಲೆಗೆ ಬಗ್ಸಿತ್. ಅದೊಳ್ಗಿದ್ದ ಹಸ್ರ್ ಮದ್‌ನ ನನ್ನ ಕೈಲಿ ಕೊಟ್ಟ್ ಇದರ್ನ ಸ್ವಲ್ಪಸ್ವಲ್ಪನೇ ಕುಡ್ಸಿ ತೇಳ್ತ್. ಮತ್ತೆ ಒಂದು ಹೊಸ ಬ್ಲೇಡ್‌ನ ತೆಗ್ದ್ ನನ್ನ ಫ್ರೆಂಡ್‌ನ ಮುಖದ ಆ ಕಡೆ ತಿರ್ಗಿಸಿಕೆ ಹೇಳಿ, 'ವಿ' ಆಕಾರಲಿ ಹಾವ್ ಕಚ್ಚಿದ ಭಾಗನ ಕುಯ್ತ್. ರಕ್ತ 'ಚಿಲ್ಲ್'ತ ಹೊರಗೆ ಬಂದದ್ನ ನೋಡಿ ನನ್ನ ಮೈ 'ಜುಂ' ತೇಳ್ತ್. ನನ್ನ ಫ್ರೆಂಡ್ ಆಗ ವಿಪರೀತ ಬ್ಯಾನೆಂದ ನರಳ್ತಾ ಇತ್ತ್. ಅವನ ಮುಖ ಬೆವ್ತ್ ಹೋಗಿತ್ತ್. ನಾವು ಅವನ ಟೀ ಶರ್ಟ್ ಬಿಚ್ಚಿ ಅವಂಗೆ ಗಾಳಿ ಹಾಕಿಕೆ ಶುರುಮಾಡ್ದೊ. ವೈದ್ಯ ವಾಟರ್ ಬಾಟ್ಲ ಹೊರಗೆ ತೆಗ್ದ್, ನೀರ್‌ಲಿ ಲಾಯ್ಕ ಬಾಯಿ ಮುಕ್ಕಳಿಸಿ ಹಿಂದೆ ಮುಂದೆ ನೋಡದೆ ಹಾವು ಕಚ್ಚಿದ ಭಾಗನ ಗಟ್ಟಿಯಾಗಿ ಹಿಡ್ಕಂಡ್ ಬಾಯಿಂದ ಕಚ್ಚಿ ಹಿಡ್ದ್ ವಿಷನ ಚೀಪಿ ಹೀರಿ 'ಪಿಚ್ಚ್' ತ ಸೈಡ್‌ಗೆ ಉಗ್ತ್. ನಾವೆಲ್ಲ ಬೆರಗಾಗಿ ಅಂವ ಮಾಡ್ದನ್ನ ನೋಡಿಕಂಡ್ ನಿತ್ತ್‌ಬುಟ್ಟೊ. ಅಂವ ಹಂಗೇ 8–10 ಸಲ ಮತ್ತೆ ಪುನಃ ಲಾಯ್ಕ ಬಾಯಿ ಮುಕ್ಕಳಿಸಿತ್. ಮತ್ತೆ ಅವನ ಹಸಿರ್ ಬಾಟ್ಲಿಂದ ಮದ್ದ್ ತೆಗ್ದ್ ಒಂದರ್ಧ ಗ್ಲಾಸ್ ಅವನೇ ಕುಡ್ತ್. ಮತ್ತೆ ಎದ್ದ್ ಹೋಗಿ ಎಂತೋ ಸೊಪ್ಪಿನ ತಂದ್ ಅರ್ದ್ ಅದ್ನ ಗಾಯಕ್ಕೆ ಅಂಟಿಸಿತ್.

'ಇನ್ನೇನೂ ಚಿಂತೆ ಮಾಡ್‌ಬ್ಯಾಡಿ...ಇವ್ರಿಗೇನೂ ಆಗ ಕಿಲ್ಲಾ' ತೇಳ್ತ್. ಆದ್ರೂನೂ ನಮ್ಗೆ ಹೆದ್ರಿಕೆ ನಿತ್ತಿಲ್ಲೆ. ತುಂಬಾ ಥ್ಯಾಂಕ್ಸ್...ಆದ್ರೂ ಒಂದ್ಸಲ ಇವನ್ನ ಸಿಟಿ ಆಸ್ಪತ್ರೆಗೆ ಕರ್ಕೊಂಡ್ ಹೋಗಿ ತೋರಿಸ್ತೇವೆ'ತ ನನ್ನ ಫ್ರೆಂಡ್ ಹೇಳ್ತ್. ಅದ್ಕೆ ವೈದ್ಯ 'ನಿಮ್ಮಿಷ್ಟ...ಆದ್ರೆ ಬೇಕಾಗಿಲ್ಲ ನಾ ಮಾಡಿರೋ ಚಿಕಿತ್ಸೆನೇ ಸಾಕು.. ಆದ್ರೂ ನಾ ಕೊಟ್ಟಿರೊ ಹಸಿರು ಔಷಧಿನ ಇನ್ನೊಂದು ತಾಸು ಸ್ವಲ್ಪ ಸ್ವಲ್ಪನೇ ಕುಡಿ ಸೋದು ಮರೀಬ್ಯಾಡ್ರಿ'ತ ಹೇಳ್ತ್. ಸರಿ ತ ಹೇಳಿ ನಾವು ಅಲ್ಲಿಂದ ಹೊರ್ಟ್ ಅವನ್ನ ಸಿಟಿ ಆಸ್ಪತ್ರೆಗೆ ತಂದೊ. ಡಾಕ್ಟರ್ ಅವನ್ನ ಟೆಸ್ಟ್ ಮಾಡಿಬುಟ್ಟ್ 'ಏನೂ ವರಿ ಮಾಡ್ಕೊಬೇಡಿ ಇವರ ಮೈಯಲ್ಲಿ ವಿಷ ಸ್ವಲ್ಪಾನೂ ಹರಡಿಲ್ಲ'ತ ಭರವಸೆ ಕೊಟ್ಟತ್. ಆದ್ರೂ ಅವಂಗೆ ಇಂಜಕ್ಷನ್ ಕೊಟ್ಟ್, ಗಾಯನ ಡ್ರೆಸಿಂಗ್ ಮಾಡಿ ಕಳ್ಸಿತ್. ಸದ್ಯ ನನ್ನ ಫ್ರೆಂಡ್‌ದ್ ಜೀವಕ್ಕೇನೂ ಆಗ್ಲೆತ ಹೇಳಿ ನಮಿಗೆಲ್ಲಾ ಹೋದ ಜೀವ ಬಂದಂಗಾತ್.

ಎಡಿಕೇರಿ ಸುಧರ್ಶನ, ಬೆಂಗಳೂರು.

ಇದ್ ನಡ್ದ್ 2 ದಿನಕ್ಕೆ ಅವನ ಗಾಯ ಮಾಸಿ ಎದ್ದ್ ಓಡಾಡುವಂಗೆ ರೆಡಿ ಆತ್. ಆದ್ರೆ ನನ್ನ ತಲೇಲಿ ನಿತ್ತಲ್ಲಿ ಕುದ್ದಲ್ಲಿ ಒಂದೇ ವಿಷಯ ಹುಳನಂಗೆ ಕೊರೀತಾ ಇತ್ತ್. ಆ ನಾಡ್‌ವೈದ್ಯನ ಜೋಳಿಗೆಯೊಳಗೆ ಹಸಿರ್ ಬಾಟ್ಲೆಲಿದ್ದ ಹಸಿರ್ ಮದ್ದ್...ಅದ್ ಎಂತ ಆಗಿರ್ದ್ತ?! ನಂಗೆ ಕ್ಯೂರಿಯಾಸಿಟಿ ತಡಿಯಕ್ಕಾಗದೆ, ಆ ಫಾರಂ ಹೌಸ್ ಓನರ್, ನನ್ನ ಫ್ರೆಂಡ್‌ನ ಕರ್ಕಂಡ್ ತೋಟದ ಮಾಲಿನ ಸಹಾಯ ಪಡ್ದ್, ಆ ನಾಡ್ ವೈದ್ಯನ ಮನೆಗೆ ಹೋದೊ.

ಅವನ ದಯೆಂದ ಈಗ ನಮ್ಮ ಫ್ರೆಂಡ್ ಆರಾಮಲಿ ಉಟ್ಟ್ಕತ ಅವಂಗೆ ತಿಳ್ಸಿದೊ. ಕುಶಲೋಪಚಾರದ ಮಾತ್‌ಗ ಎಲ್ಲಾ ಮುಗ್ದ ಮೇಲೆ ನಾನ್ 'ನೀವ್ ಆ ಹಸಿರು ಔಷಧಿ ಕೊಟ್ರಲ್ಲ, ಅದು ಏನು?'ತ ನೇರ ಪ್ರಶ್ನೆ ಕೇಳ್ದೆ. ವೈದ್ಯ ನೆಗಾಡಿಬುಟ್ಟ್—'ಅಯ್ಯೋ ಬುಡಿ...ಅದ್ನ ಕಟ್ಕಂಡ್ ನೀವೇನ್ ಮಾಡೀರಿ?' ತ ತಳ್ಳಿ ಹಾಕಿತ್. ನಾನ್ ಬುಡದೆ ಇಲ್ಲ...ನೀವು ಹೇಳ್ಲೇ ಬೇಕು ಆ ಔಷಧಿಯಿಂದ್ಲೆ ನಮ್ಮ ಫ್ರೆಂಡ್ ಮೈಲಿದ್ದ ವಿಷ ಮಾಯ ಆಗಿದ್ದು...ದಯವಿಟ್ಟ್ ತಿಳ್ಸಿ. ತೇಳಿ ಕೇಳ್ಕಂಡೆ.—'ನೋಡಿ...ನನ್ನ ತಾತನ್ ಕಾಲದಿಂದ್ಲೂನೂ ಹಾವ್ ಕಚ್ಚಿದ್ರೆ ಆ ಔಷಧಿ ಕೊಟ್ಕೊಂಡು ಬಂದಿದ್ದೀವಿ ನಾನೂ ಅದ್ನೇ ನಿಮ್ಗೆಳೆಯನ್ಗೂಕೊಟ್ಟೆ ಬುಡ್ರಿ. ತ ವೈದ್ಯ ಹೇಳ್ತ್. ನಾನ್ ಹಟ ಮಾಡಿ 'ನೋಡಿ...ಈ ತರಹದ ಆಯುರ್ವೇಧದ ಔಷಧಿಗಳನ್ನೆಲ್ಲಾ ರಹಸ್ಯ ಮಾಡಿ ಇಟ್ಕೊಂಡು ಅದು ಹಾಗೇ ಸಾಯೋ ಹಾಗೆ ಮಾಡ್ಬಾರ್ದು...ಇದ್ರಿಂದ ನಾಲ್ಕು ಜನ್ರಿಗೆ ಒಳ್ಳೇದಾದ್ರೆ ನಿಮ್ಗೇ ಪುಣ್ಯ ಅಲ್ವಾ' ತೇಳಿ ವಾದ ಮಾಡ್ದೆ. 'ಅಯ್ಯಯ್ಯೋ...ಅದ್ರಾಗೆ ರಹಸ್ಯ ಮಡ್ಗೋದೇನೈತೆ....ನಾ ಕೊಟ್ಟಿದ್ದು ಗರಿಕೆ ಹುಲ್ಲಿನ್ ರಸ ಅಷ್ಟೇಯಾ.' ತೇಳಿ ವೈದ್ಯ ಹೇಳ್ಕನ ನಮ್ಗೆ ಆಶ್ಚರ್ಯ ಆತ್. 'ಏನು?... ಬರೀ ಗರಿಕೆ ಹುಲ್ಲಿನ್ ರಸಾನಾ?' 'ನೀವು ನಿಜಾ ಹೇಳ್ತಿದ್ದೀರಾ?' ತ ನಾವಿಬ್ಬರೂ ಕೇಳ್ದೊ. 'ಅದ್ಕೇ... ನೋಡಿ ನಾವಿದ ನ್ಯಾರ್ಗೂ ಹೇಳಾಕಿಲ್ಲ. ಹಿಂಗೇ ದಿಟ ಹೇಳಿದ್ರೂ ಜನ ನಂಬಾಕಿಲ್ಲ. ಆದ್ರೆ ನಾನ್ ನಿಮ್ಗೆಳೆಯನ್ಗೆ ಕೊಟ್ಟಿದ್ದು ನಾ ಕುಡ್ದಿದ್ದೂ ಎಲ್ಲೂ ಎಳ್‌ನೀರ್ ಜೊತೇಲಿ ಗರಿಕೆ ಹುಲ್ಲಿನ್ ರಸ ತೇಳ್ತ್ ವೈದ್ಯ

* * *

ಈ ಘಟನೆ ನಡ್ದ ಮೇಲೆ, 'ಗರಿಕೆ' ಹುಲ್ಲಿನ ಔಷಧಿ ಗುಣಗಳ ಬಗ್ಗೆ ಹೆಚ್ಚಾಗಿ ತಿಳ್ಕೊಣುಕುತ ಆಸೆ ಆಗಿ ಅದರ ಬಗ್ಗೆ ಸುಮಾರ್ ಪುಸ್ತಕಗಳ್ನ ಓದಿದೆ. ಅಸಾಮಾನ್ಯವಾದ ಈ ಗರಿಕೆ ಹುಲ್ಲಿನ ಬಗ್ಗೆ ತಿಳ್ಕೊಕಾದ್ರೆ ಒಂದು ಪುಸ್ತಕಾನೇ ಬರಿಯಕ್. 'ಗರಿಕೆ ಹುಲ್ಲು' ಭೂಮಿದ್ ಯಾವುದೇ ಭಾಗಲೂ ಸ್ವಲ್ಪ ತೇವಾಂಶ ಸಿಕ್ಕರೆ ಸಾಕ್ ಅಲ್ಲಿ ಹುಟ್ಟ್‌ಕಂಡ್ ಹರಡಿದೆ. ಇದ್ನ ನಿವಾರಣೆ ಮಾಡ್ದು ತುಂಬಾ ಕಷ್ಟ ಅದ್ರಿಂದ ಗರಿಕೆಗೆ ಸಂಸ್ಕೃತಲಿ "ಸಹಸ್ರವೀರ್ಯಾ," "ಶತಪರ್ವಿಕಾ", "ಅನಂತಾ" ಮತ್ತೆ 'ಶತವಲ್ಲಿ"ತ ಕರ್ದವೆ. ಗರಿಕೆದ್ ಮುಖ್ಯವಾದ ಔಷಧೀ ಗುಣಗಳ್ನ ಈ ಕೆಳಗೆ ಬರ್ದೊಳೆ :

1. ಹುಲುಸಾಗಿ ಬೆಳ್ದ ಒಂದು ಹಿಡಿ ಗರಿಕೆ ಹುಲ್ಲ್‌ನ ಶುಭ್ರವಾದ ನೀರ್‌ಲಿ ತೊಳ್ದ್, ಅರ್ದ್. ರಸ ತೆಗ್ದ್ ಎಳನೀರ್ ಅಥವಾ ಜೇನ್ ಒಟ್ಟಿಗೆ ಮಿಶ್ರ ಮಾಡಿ [1–2 ಚಮಚ, ದಿನಕ್ಕೆ ಮೂರು ಬಾರಿ] ಸೇವಿಸಿರೆ ಮೂತ್ರಲಾಗುವ ಉರಿ, ಗಾಯದ ರಕ್ತ ಸ್ರಾವ, ಮಲದಲ್ಲಿ ರಕ್ತಸ್ರಾವ, ಮೂಳೆರೋಗ ಮತ್ತೆ ಮೂಲವ್ಯಾಧಿ ರಕ್ತಸ್ರಾವ ನಿತ್ತದೆ.

2. ಗರಿಕೆ ಹುಲ್ಲ್‌ದ್ ರಸಕೆ ಅಷ್ಟೇ ಪ್ರಮಾಣದ ತೆಂಗಿನೆಣ್ಣೆ ಮಿಶ್ರ ಮಾಡಿ ಕೂದಲಿಗೆ ಹಚ್ಚಿ ಒಂದ್ ಗಂಟೆ ಬುಟ್ಟ್ ಮೀಯದರ್‌ಂದ ಕೂದ್ಲು ಉದುರ್ದು, ಹೊಟ್ಟು ಹೋದು ಮತ್ತೆ ಕಣ್ಣ್ ಉರಿಯಾದು ನಿತ್ತದೆ.

3. ಲೆಪ್ರಸಿನೂ ಸೇರಿ, ಎಲ್ಲಾ ತರದ ಚರ್ಮರೋಗಗಳಿಗೆ, ಚರ್ಮದ ಕಲೆ ಮತ್ತೆ ಮೊಡವೆಗೆ ಗರಿಕೆ ರಸದೊಟ್ಟಿಗೆ ಅಷ್ಟೇ ಪ್ರಮಾಣದ ಬೇವಿನ ಎಲೆ ರಸ ಮತ್ತೆ ಗರಿಕೆ ಬೇರ್‌ದ್ ರಸ ಮಿಶ್ರ ಮಾಡಿ ಲೇಪನೆ ಮಾಡ್ರೆ ಖಂಡಿತ ಗುಣ ಆದೆ.

4 ಗರಿಕೆ ಹುಲ್ಲ್‌ನ ತೊಳ್ದ್ ತಾಂಬೂಲ ಆಗಿವಂಗೆ ಲಾಯ್ಕು ಅಗ್ದ್ ಉಗಿಯದ್ರಿಂದ ಬಾಯಲಿ ದುರ್ಗಂಧ ನಿವಾರಣೆ ಆದಲ್ಲದೆ, ವಸಡಿನ ರಕ್ತಸ್ರಾವ ನಿತ್ತದೆ.

5. ಗರಿಕೆ ರಸದೊಟ್ಟಿಗೆ ಜೇನ್ ಮಿಶ್ರ ಮಾಡಿ ಸೇವನೆ ಮಾಡುದ್ರಿಂದ ತಾಯಂದ್ರ ಎದೆಹಾಲ್ ವೃದ್ಧಿಯಾದೆ ಮತ್ತೆ ಆ್ಯಸಿಡಿಟಿ ಕಡಿಮೆಯಾಗಿ, ರಕ್ತಶುದ್ಧಿಯಾದೆ ಆಹಾರ ಲಾಯ್ಕು ಜೀರ್ಣ ಆದಲ್ಲದೆ, ಹೆಂಗಸರಿಗೆ ಮುಟ್ಟಿನ ತೊಂದರೆ ನಿವಾರಣೆ ಆದೆ

6. ಅಸ್ತಮಾ, ಬಿ. ಪಿ. ಮತ್ತೆ ಡಯಾಬಿಟೀಸ್ ಪೀಡಿತರ್ಗೂ ಗರಿಕೆರಸ ರಾಮಬಾಣ ಇನ್ನೂ ಬೇಕಾದಷ್ಟ್ ಪ್ರಯೋಜನಗ ಉಟ್ಟ್.

'ಹುಲಿ ಹುಲ್ಲು ತಿಂದದ್ಯಾ' ತೇಳಿ ಗಾದೆ ಹೇಳುವೆ. ಆದ್ರೆ

[ 17ನೇ ಪುಟ ನೋಡಿ ]

## ನಗೆ ಹನಿಗ

ಒಂದೂರ್ಲಿ ಒಂದು-ಅಜ್ಜ, ಅಜ್ಜಿ, ಪಿಳ್ಳಿ ಮೂರು ಜನ ಇದ್ದೊ. ಈಗ ಬೇಸಿಗೆ ಕಾಲ ನೋಡಿ, ಗದ್ದೆ ಕೊಯ್ದ್ ಆಗಿ, ಗದ್ದೆಗೆ ದನಗಳ ಬುಡುವ ಸಮಯ ದಿನೋಳು ಅಜ್ಜ ದನ ನೋಡ್ತಾ ಇತ್ತ್. ಒಂದ್‌ದಿನ ಅಂದ್ರ ಸಂಕ್ರಮಣ ದಿನ ಪಿಳ್ಳಿಗೆ ರಜ. ಆ ದಿನ ಪಿಳ್ಳನು, ಅಜ್ಜನು ದನ ನೋಡಿಕೆ ಹೋದವೆ.

ಈ ಸಮಯಲಿ ಗದ್ದೆಲಿ ಕೇರೆ ಹಾವು, ಕಾಟಿನುರ್ಖ, ಇಂತ ಹಾವುಗ ಜಾಸ್ತಿಯಾಗಿ ಇದ್ದವೆ. ಅಜ್ಜ ಹಳೇ ಕಾಲದ ಅಜ್ಜ, ಅದರ್‌ಂದ ಹಾವು ತಿಂಬಕೆ ಗ್ಯಾನ ಆತ್. ಪಿಳ್ಳಿ ನೊಟ್ಟ್‌ಗೆ ತುಳು ಭಾಷೆಲಿ 'ಕೇರೆನ ಪತ್ತ್ ಪತ್ತ್' ತಾ ಹೇಳ್ತ್ ಪಿಳ್ಳಿ ಹೇಳ್ತ್ ಅದ್ 'ಕೇರೆ ಕೇರೆ' ತೇಳಿ ಸುಮ್ಮನೆ ಬುಟ್ಟತ್. ಅಜ್ಜ ಹೆಂಗೆಲ್ಲೋ ಮಾಡಿ ಕೇರೆನ ಹಿಡ್ದ್ ರುಚಿಯಾಗಿ ಸಾರ್ ಮಾಡಿ ಪಿಳ್ಳಿಗೆ ಇಕ್ಕಿತ್. ಪಿಳ್ಳಿಗೆ ಅಜ್ಜನ ಮಾಸ ಸಾರ್ ಬಾರೀ ರುಚಿ ಆಗಿ 'ರೇಸ ಬೋಡು' ತಾ ಹೇಳ್ತ್. ಆಗ ಅಜ್ಜ ಹೇಳ್ದ್ 'ಪತ್ತ್ ಪತ್ತ್‌ಂದ್ ಪಣ್ಣಗ ಕೇರೆ ಕೇರೆಂದ್ ಪಂಡ, ಇತ್ತ ರೇಸ, ರೇಸ ಬೋಡುಂದ್ ಕೇಣ್‌ಪನಾ' ತೇಳಿ ಅಜ್ಜ ಪಿಳ್ಳಿಗೆ ಸಾರ್‌ನ ರಸನ ಹಾಕಿದೆ ಅಜ್ಜನ ಮಾಸ ಸಾರ್ ಎಷ್ಟ್ ರುಚಿಯಾಗಿರುದಲ್ಲಾ.

—ಹುಲಿಮನೆ ರಾಮಣ್ಣ, ಲೋಕೇಶ, ಮಡೆ.

## ಹೆಸರು

ಒಂದ್ ಊರ್‌ಲಿ ಹೊಸದಾದ ನವದಂಪತಿಗ ಇದ್ದವೆ. ಅವ್ಕೆ ಒಂದ್ ಆಸೆ ಇದ್ದದೆ. ಏನ್‌ತೇಳ್ರೆ ಅವ್ಕೆ ಹುಟ್ಟುವ ಕೂಸುಗೆ ಹೊಸ ಹೆಸ್ರ್ ಇಡಕುತ. ಆ ಹೆಸ್ರ್ ಯಾರ್ ಇಟ್ಟಿರ್‌ಕಾಗದ್. ಹಿಂಗೆ ಒಂದ್ ವರ್ಷ ಕಳ್ದದೆ. ಒಂದ್ ದಿನ ಅವುಳಿಗೆ ಗಂಡ್ ಕೂಸ್ ಆದೆ. ಅವ್ಕೆ ಕುಷಿಯೋ ಕುಷಿ. ಕೂಸ್‌ಗೆ ಹೆಸ್ರ್ ಇಡಿಕೆ ಗಂಡ ಹೆಣ್ಣ್ ಹೊಸ ಹೆಸ್ರ್ ಹುಡ್ಕುತ ಇದ್ದವೆ. ಆಗ ಹೆಣ್ಣ್ ಹೇಳ್ದ ಹೆಸ್ರ್ ಹೃದಯಕ್ಕೆ ಮುಟ್ಟೊಂಗೆ ಇರಕುತ. ಕಡೆಗೆ ಅವುಳೇ ಒಂದ್ ಹೆಸ್ರ್ ಹೇಳ್ದ. 'ವಿನಯನ್'ತ ಆಗ ಗಂಡ ಹೇಳ್ದ ಆ ಹೆಸ್ರ್ ಬ್ಯಾಡನೇ. ಅದ್ ಹೃದಯಕೆ ಮುಟ್ಟುಲೇ ಅದರ ಬದ್ಲ 'ಬನಿಯನ್'ತ ಇಡನ ಅದ್ ಹೃದಯಕೆ ಮುಟ್ಟದೆ.

—ಸಂಗ್ರಹ : ಅಚ್ಚಲ್ಪಾಡಿ ಬೀನ ಗೋಪಾಲ, ಗದ್ದಿಗೆ.

## ನಿಮಿಗೆ ಬೇಕಾ

ಪ್ರೇಮ ಗೂಡೆ ಹೆತ್ತ್ ಆಸ್ಪತ್ರೆಲಿ ಇತ್ತ್. ನೆಂಟರ್ ನಾಡವೆಲ್ಲಾ ಬಂದ್ ಕೂಸುನಾ, ಹೆತ್ತವಳಾ ನೋಡಿಕಂಡ್ ಹೋಕಂಡ್ ಇದ್ದೋ.

ಹಿಂಗೇ ಒಂದ್‌ದಿನ ಪ್ರೇಮನ ಜೊತೆ ಅವ್ವಿ ಮತ್ತೆ ಪೊನ್ನಕ್ಕ ಕಾಲೇಜ್ ಬುಟ್ಟಂಗೇ ನೋಡಿಕೆ ಹೋದೊ. ಹತ್ರ ಇದ್ದ ಕಟ್ಲ್ ಕೊಡಿಲಿ ಕುದ್ದ್ ಕಂಡ್ ಕಷ್ಟ ಸುಖ ಹೇಳಿಕಂಡ್ ಇರ್ಕಾಕನ ಅವ್ವಿ ಗೂಡೆ ಮೆಲ್ಲೆ ಕೂಸುನ ಎತ್ತಿಕಂಡ್ ನಮ್ಮನೆಗೆ ಪೊಯಾ ಅಮ್ಮ ತೇಳಿ ತಮಾಷೆ ಮಾಡಿಕಂಡ್ ಇರ್ಕಾಕನ ಕೂಸುನ ಅಣ್ಣ ಓಡಿ ಕಂಡ್ ಬಂದ್ ನನ್ನ ತಂಗೆ ಕೂಸುನ ಎತ್ತಿಕಂಡದರ ಕಂಡ್ ಮುಖ ಒಂದು ತರ ಆತ್. ಆಗ ಪೊನ್ನಕ್ಕ ಗೂಡೆ ಕೇಳ್ತ್, ಮಧು ಈ ಕೂಸುನ ನಾನ್ ತಕಂಡ್ ಹೋನೆ ಈ ಕೂಸು ನಂಗೆ ಇರ್ಲಿ ಅಲಾ. ಆಗ ಸಿಟ್ಟ್‌ಲಿ ಇದ್ದ ಮಧು ನಿಮಿಗೆ ಬೇಕಾದ್ರೆ ನನ್ನ ಡ್ಯಾಡಿಗೆ ಹೇಳ್ನಿ ನಿಮಿಗೆ ಒಂದೊಂದು ಕೂಸುನ ಮಾಡಿಕೊಡಿಕೆ ತ ಹೇಳ್ತ್.

—ಬಾರಿಕರ ಜಯಂತಿ ಪಾಪಣ್ಣ, ಮರಂದೋಡ.

[ 16ನೇ ಪುಟದಿಂದ ಮುಂದುವರಿದುದು ]

ಹುಲಿ ಮಾತ್ರ ಅಲ್ಲ. ಮುಂಗುಸಿ, ನಾಯಿ, ಮತ್ತೆ ಕೋತಿ ಕೂಡ ಹೊಟ್ಟೆ ಕೆಡ್‌ಕಾಕನ ಹುಲ್ಲು ತಿಂದ್ ಉಗಿಯುದನ್ನ ನೀವೆಲ್ಲಾ ನೋಡಿರುವರಿ.

ನಮ್ಮ ಹಿರಿಯರಿಗೆ ಈ ತರ ನಾನಾ ರೀತಿದ್ ನಾಡ್ ಮದ್ದ್‌ಗ ಗೊತ್ತಿದ್ದದೆ ಆದರ್ನ ಅವು ಯಾರಿಗೂ ಹೇಳಿ ಕೊಡದೆ ಆ ವಿದ್ಯೆ ಅವರೊಟ್ಟಿಗೇ ಸತ್ತ್ ಹೋದೆ ಕೆಲವು ವರ್ಷಗಳ ಹಿಂದೆ ದಿವಂಗತ ದೇವರಾಜ್ ಅರಸ್‌ಗೆ [ಕರ್ನಾಟಕದ ಮುಖ್ಯ ಮಂತ್ರಿ ಆಗಿದ್ದೊ] 'ಸರ್ಪಸುತ್ತು' ಕಾಯಿಲೆ ಬಂದ್ ಯಾವ ಇಂಗ್ಲಿಷ್ ಮದ್ದ್ ವಾಸಿಮಾಡದೇ ಇರ್ಕನ ಮಂಗಳೂರ್‌ನ ಒಂದು ಅಜ್ಜ ಕೊಟ್ಟ ನಾಡ್‌ಮದ್‌ಂದ ಸರ್ಪಸುತ್ತ್ ಗುಣ ಆಗಿತ್ತ್. ನಮ್ಮ ನಿಮ್ಮಗಳ ಮಧ್ಯನೂ ಹಿಂಗ ಯಾರಾದ್ರ ನಾಡ್ ಮದ್ದ್‌ಗಳ ಗೊತ್ತಿರವಿದ್ರೆ ಅದ್ನ ಹೇಳ್ಸಿಕಂಡ್ ನಮ್ಮ ಸಂಗಾತಿಯು [ಕೊಡಗು ಸಂಗಾತಿಗೆ] ಮೂಲಕ ನಮ್ಮ ಜನಕ್ಕೆ ತಿಳ್ಸಿಕೊಡಿತ ನನ್ನ ಪ್ರಾರ್ಥನೆ.

ಬೇಸರ ಕಳಿಯುಲು ಬೇಕು

ಕೊಡಗು ಸಂಗಾತಿ ಪತ್ರಿಕೆ

# ರೆಕ್ಕೆ ಇದ್ರೂ ಹಾರದ ಹಕ್ಕಿ

ಕುಂಜಿಲನ ರಾಜ ಆರ್. ಕುಂಬಳದಾಳು

ರಂಜನಿ ಗೂಡೆ ಅಪ್ಪ ಅವ್ವಂಗೆ ಮುದ್ದಿನ ಕೂಸು. ಅವು ಐದ್‌ಜನ ಹೆಣ್ಣ್ ಮಕ್ಕ. ಗಂಡ್ ಮಕ್ಕ ಇಲ್ಲೆ. ಅಕ್ಕಂದರ್ ಎಲ್ಲಾ ಮದ್ವೆ ಆದೋ. ರಂಜನಿನಾ ಪೊಕ್ಪ, ಅವ್ವ ಅಕ್ಕಂದರ್‌ಗೆಲ್ಲಾ ತುಂಬಾ ಕುಶಿ ಮಾಡ್‌ತ್ತಿದ್ದೋ. ಕಡೆ ಕುಟ್ಟೆಕಾ ಹೇಳಿ ಕಂಡ್ ಇವ್ಳಿಗೆ ಕಷ್ಟತೇಳುವಂತದ್ ಗೊತ್ತ್ಲೆ. ಸುಃಖಿಲಿ ಸಾಂಕುವ ಹೈದ ಸಿಕ್ಕಲಿಂತ ನೋಡ್ದೊ. ನೆರೆ ಕರೆಯವರ ಸಹಾಯಂದ ಒಂದ್ ಕಡೆ ನೆಂಟಸ್ಥನ ಆತ್. ಹೈದ ಕಳ್ಳ್ ಕುಡಿಯುಲೆ, ಇಸ್ಪಿಟ್ ಆಡ್ದುಲೆ, ಹನ್ಸ್ ತಿಂಬಲೆ, ಸಿಗರೇಟ್ ಸೇದುಲೆ, ಮತ್ತೆ ಗೂಡೆ ಚಟ ಸನ ಇಲ್ಲೆತ ಊರವು ಎಲ್ಲಾ ಹೇಳ್‌ತ್ತಿದ್ದೊ. ಆಗ ರಂಜು ಗೂಡ ಹೇಳ್ತ್, ಕಳ್ಳ್ ಕುಡಿಯದ ಹೈದ ನಂಗೆ ಬ್ಯಾಡತ. ಹೈದನ ಅಪ್ಪ ಸಾದ್ ಸ್ವಭಾವದವು. ಅಪ್ಪಂಗೆ ಸ್ವಲ್ಪ ಕೈ ಬಾಯಿ ಎಲ್ಲಾ ಮುಂದೆ.

ಹೈದ [ಗಿರಿ]ನ ಅಪ್ಪ ರಂಜುಗೆ ಸಮಾಧಾನ ಹೇಳ್ತ್ ನೀನ್ ಹಟ ಹಿಡಿಬಡ ಅವ್ವ. ಅಂತ ಕಟ್ಟೆಬುದ್ಧಿ ಇರ್‌ಕಾಗದ್‌ತ ರಂಜು ಮಾವನ ಮಾತ್‌ಗೆ ಬೆಲೆಕೊಟ್ಟತ್. ಹಿಂಗೆ ಹೈದ ಗೂಡೆ ಒಪ್ಪಿದೊ. ಮನೆಯವುಕೂ, ನೆಂಟ್ರಗೂ ಎರಡ್ ಕಡೆಯವುಕ್ಕೂ ಒಪ್ಪಿಗೆ ಆತ್. ಇಂದಿಗೆ ಎಂಟಕ್ಕೆ ಲಗ್ನ ಕುಟ್ಟದುತಾ ಮಾತಾಡಿಕಂಡ್ ಹೋದೋ. ಸ್ವಲ್ಪ ದಿನಲಿ ಮದ್ವೆನು ಆತ್. ಹಿಂಗೆ ಒಂದು ವಾರ ಕಳ್ತ್. ಅತ್ತೆ ಅತ್ತೆನ ನಿಜ ಬುದ್ಧಿನ ತೋರ್ಸಿಕೆ ಸುರುಮಾಡ್ತ್. ಸೊಸೆ ಯಾವತರದ ಅಡಿಗೆ ಮಾಡ್ರ ಸರಿ ಆಲೆ. ಬೈಕಂಡ್ ಇರ್ದು, ಆ ಕೆಲ್ಸ ಮಾಡ್ತಲೇ ಈ ಕೆಲ್ಸ ಮಾಡ್ತಲೆತಾ. ರಂಜು ಕೈಲಿ ಆದಷ್ಟ ಕೆಲ್ಸ ಮಾಡ್‌ತ್ತಿತ್ತ್. ಸೊಸೆ ಬ್ಯಾರೆಯವರ ಕಣ್ಣೆತ್ತಿ ನೋಡ್ದು ಮಾತಾಡ್ದು ಅತ್ತೆಗೆ ಕಾಂಬಕೆ ಬೊತ್ತ್. ಬಾಯಿಗೆ ಬಂದಂಗೆ ಬಯ್ಯ್ಯದು. ಹಿಂಗೆ ಅತ್ತೆ ದಿನಂದ ದಿನಕ್ಕೆ ತುಂಬಾ ಹಿಂಸೆ ಕೊಡ್‌ತ್ತಿತ್ತ್. ಸೊಸೆನ ಮನ್ಸಿಗೆ ಬ್ಯಾಜರ ಆಗುವಂತ ಮಾತ್ ಹೇಳ್‌ತ್ತಿತ್ತ್. ಇವ್ಳ ಈ ವಿಷಯನ ಗಂಡಂಗೆ ಹೇಳ್ರೆ ಅವು ಜಗಳ ಆಡುವೆ. ಆಗ ನಮ್ಮ ಮನೆ ವಿಷಯ ನೆರೆಕರೆಯವುಕೆ ಗೊತ್ತಾದೆ. ನಮ್ಮ ಮನೆ ಮರಿಯಾದೆ ನಾವು ಕಳೆಯುಕಾಗದ್‌ತಾ ಗ್ಯಾನ ಮಾಡಿ ಸುಮ್ಮನೇ ಇರ್‌ತ್ತಿತ್ತ್. ಅತ್ತೆ ಮಂಜಗೆ ಚಾಡಿ ಹೇಳಿಕೆ ಸುರ್ ಮಾಡ್ತ್. ನಿನ್ನ ಹೆಣ್ಣ್ ಅಂತವಳು, ಇಂತವಳು ನೀನಾರ್ ಸ್ವಲ್ಪ ಬುದ್ಧಿ ಹೇಳ್‌ತಾ. ಗಿರಿ ಬಂದ್ ಅಪ್ಪನ ಕೇಳ್ತ್ ಈ ಮನೆಲಿ ಎಂತ ನಡಿತವುಟ್ಟು ನೀನಾರ್ ಹೇಳ್‌ತಾ. ಅಷ್ಟೊತ್ತಿಗೆ ಅವ್ವ ಅಪ್ಪನ ಕಣ್ಣ್ ನೋಡ್ತ್. ಅಪ್ಪ ಒಲೆ ಬುಡಕ್ಕೆ ಚಳಿಕಾಸಿಕೆ ಬಂದವು ಕಟ್ಟೆಳಂದ ವಾಪಾಸ್ ಹೋದೋ. ಇಂವ ಹೆಣ್ಣ್‌ಗೆ ಜೋರ್ ಮಾಡ್‌ತ್ಲೆ. ಸುಮ್ಮನೆ ಇತ್ತ್ ವಿಷಯ ಗೊತ್ತಾಗಲಿತಾ. ಒಂದು ದಿನ ಅವ್ವ ಉಷಾರಿಲ್ಲತ್ತೇಳಿ ಆಸ್ಪತ್ರೆಗೆ ಹೋತ್. ಅಪ್ಪ, ಮಂಜ, ಸೊಸೆ ಮೂರೆ ಜನ ಮನೆಲಿ ಆಗ ಅಪ್ಪ ಹೇಳ್ತ್, ಗಿರಿ ನಿನ್ನ ಹೆಣ್ಣ್‌ದ್ ಎಂಥ ತಪ್ಪು ಇಲ್ಲೆನೇ. ಇಂಥವಳು ಸಿಕ್ಕಿಕೆ ನೀನ್ ಪುಣ್ಯ ಮಾಡಿರಕು. ನಿನ್ನ ಅವ್ವನಂತವು ಈ ಭೂಮಿ ಮ್ಯಾಲೆ ಇದ್ದರೆ ಬ್ಯಾಗ ಪ್ರಳಯ ಆದೆತಾ ಅಪ್ಪ ಹೇಳ್ತ್. ಸುಮಾರ್ ಹೊತ್ತ್ ಕಳ್ದ ಮ್ಯಾಲೆ ಅವ್ವ ಬಾತ್. ದಾರಿಲಿ ಬಾಕನ ಸಂಸಾರ ಹಾಳ್ ಮಾಡ್ವ ಹೆಂಗ್ಸ್ ಸಿಕ್ಕತ್. ಅವು ಹಂಗೆ ಇವು ಹಿಂಗೆ ಹೇಳಿ ಸುಮಾರ್ ಚಾಡಿ ಹೇಳ್ತ್. ಲಾಸ್ಟ್‌ಗೆ ನಿಮ್ಮ ಸೊಸೆ ಹೆಂಗೆತಾ ಕೇಳ್ತ್. ಅಜ್ಜಿಗೆ ಅಷ್ಟೇ ಬೇಕಾದ್. ಸೊಸೆನ ಸುಮಾರ್ ತರಲಿ ಹೇಳ್ತ್. ಸಂಸಾರ ಹಾಳ್ ಮಾಡುವ ಹೆಂಗ್ಸ್ ಕೇಳ್ತ್. ನೀವು ಆ ಸೊಸೆನ ತವರು ಮನೆಗೆ ಓಡ್ಸಿ ತಾ ಹೇಳ್ತ್. ಅಜ್ಜನ ಕಿವಿ ನೆಟ್ಟಂಗೆ ಆತ್. ಇದ್ ಒಳ್ಳೆ ಐಡಿಯಾ ತಾ ಮನೆಗೆ ಬಂದ್ ಮಂಜನ ಪೂಸಿ ಮಾಡ್ತ್. ಗಿರಿ ಎಂತ ಗೊತ್ತಿಲ್ಲದಂಗೆ ಇತ್ತ್. ಲಾಸ್ಟ್‌ಗೆ ಅವ್ವ ಹೇಳ್ತ್. ನೀನ್ ಅವ್ಳನ ಬುಟ್ಟ್ ಬುಡ್, ನಿಂಗೆ ಒಳ್ಳೆ ಕಡೆ ಹೆಣ್ಣ್ ನೋಡ್ನೆತಾ. ಇಂವ ಆದ್ಯೆ ಆತ್‌ತೇಳ್ತ್. ಈ ಮಾತ್ ಕೇಳಿ ಅಜ್ಜಿಗೆ ಕುಷಿಯಾತ್. ಹೈದ ನನ್ನ ಮಾತಿಗೆ ಒಪ್ಪಿತಲ್ಲತ ಅವ್ವ, ನಾನ್ ಯಾಗ ಹೋಕು, ನನ್ನ ಮುಖ ಲಾಯ್ಕ ನೋಡಿಕ ಇನ್ನ್ ನನ್ನ ಮುಖ ನೋಡಿಕೆ ನಿಂಗೆ ಸಿಕ್ಕಿಕ್ಕಲೆತಾ ಹೇಳ್ತ್. ಆಗ ಅಜ್ಜಿಗೆ ಉಸ್ರ್ ಮ್ಯಾಲೆ ಹೋದಂಗೆ ಆತ್. ಎಂಥಕ್ಕೆ ಅಣ್ಣ ಹಿಂಗೆಲ್ಲಾ ಮಾತಾಡ್ದುತ ಕೇಳ್ತ್. ಮಂಜ ಮಾತಾಡ್ತಲೆ. ಬೆಳಗ್ಗೆ ಗಿರಿ ಹೆಣ್ಣ್‌ನ ಕರ್‌ಕಂಡ್ ಹೋಕೆ ರೆಡಿ ಆತ್. ಅಪ್ಪ ಅವ್ವನ ಕಾಲಿಗೆ ನಮಸ್ಕಾರ ಮಾಡ್‌ಕಾಕನ ಅಪ್ಪನ ಕಣ್ಣ್ ತುಂಬಾ ನೀರ್ ತುಂಬಿತ್. ಸೊಸೆ ಅತ್ತೆಗೆ ಒಂದ್ ಮಾತ್ ಹೇಳ್ತ್. ಅತ್ತೆ, ನಿಮಿಗೆ ನನ್ನಂತ ಮಗುಳು ಇದ್ದ್ ಅವ್ಳಿಗೆ ಗಂಡನ ಮನೆಲಿ ಈ ತರ ಚಿತ್ರ ಹಿಂಸೆ ಕೊಟ್ಟಿದ್ದರೆ ನಿಮ್ಮ ಮನ್ಸ್‌ಗೆ ಕುಷಿ ಆಗ್‌ತ್ತಿತ್ತಾ ?

ಅತ್ತೆ ಈ ಮಾತ್ ಕೇಳಿ ದುಃಖ ತಡ್ಕಣಕೆ ಆಗದೆ ಸೊಸೆನ

[ 20ನೇ ಪುಟ ನೋಡಿ ]

# ಕರಿ ಚಿನ್ನ

## ಧಾರಾವಾಹಿ-25

ಮೂಲಕಥೆ : ಅಶ್ವಥಿ ಅರವಿಂದ್

ಅರೆಭಾಷೆಗೆ : ಎಂ.ಇ. ಮಹಮ್ಮದ್

'ಏಟ್ ಬಾರಾಬಿದ್ದ್ ನಾವು ಕ್ಯಾಂಟರೆಗೆ ಪೋಯಿ.'

ಬೋರ್‌ಗುಡ್ಡೆ ದೇವಯ್ಯ ರಾಡಿ ಬಿದ್ದ್‌ನ ಕ್ಯಾಂಟರೆಗೆ ಕರ್ಕಂಡ್ ಹೋತ್. ಅಲ್ಲಿ ಒಂದ್ ಹತ್ತ್ ನಿಮಿಷ ಏನೋ ಹೇಳ್ತ್.

ಎಲ್ಲ ಮಾತ್‌ಗೂ ಬಿದ್ದ್ ತಲೆ ಆಡ್ಸಿತ್.

'ಗೊತ್ತಾತಲೆ ! ಹ್ಞಾಂ ನೀವ್ ಇನ್ನ್ ಹೋಗಿ'

ಅವು ಮೂರು ಜನಾನು ಅಲ್ಲಿಂದ ಹೋದೊ.

'ನಾನ್ ಹಾಸ್ಟೆಲ್‌ಗೆ ಹೋನೆ ಡ್ಯಾಡಿ. ನಂಗೆ ತುಂಬಾ ನೋಟ್ಸ್ ಬರಿಯಕೆ ಉಟ್ಟ್ ಇಲ್ಲಿ ಕುದ್ದರೆ ನನ್ನ ಕೆಲ್ಸ ಒಂದೂ ಆಕಿಲೆ.'

ಜೀವನ್ ಹೇಳ್ತ್.

'ನೀನ್ ಇಲ್ಲಿ ಇದ್ದರ್‌ಂದ ನಿನ್ನ ಅವ್ವನ ಮನ್ಸ್‌ಗೆ ಸೊಲ್ಪ ಸಮಾಧಾನ ಇತ್ತ್. ಅವ್ವ ಹೋಗೂತ ಹೇಳ್ತ್ ?'

ಜೀವನ್ ಒಂದೂ ಹೇಳದೆ ಹೊರ್ಟ್ ಹೋತ್. ಹೋಗೊ ದಾರಿಲಿ ಒಮ್ಮೆ ನಾಡ್ ಕೊಲ್ಲಿ ಮಾದಪ್ಪನ ಮನೆಗೆ ಹೋಕೆ ಅಂವ ಮರ್‍ತ್‌ಲೆ.

ಅಂವ ಹೋಕಾಕನ ವೀರ ಅಡಿಗೆ ಮನೆಲೇ ಇತ್ತ್. ಬೆಳಿಗೆದ್ದ್ ರೊಟ್ಟಿ ಕಾಫಿ ಮಾಡೋ ದೆಸ್ಸಿಲಿ ಮುಳ್‌ಗಿತ್ತ್. ಮಾದಪ್ಪ ಮಾತ್ರ ಇತ್ತ್‌ಲೆ.

'ಮನೆಲಿ ಯಾರ್ ಒಳರಿ ?'

ಜೀವನ್ ತನ್ನ ಸ್ವರ ಬದ್ಲ್ ಮಾಡಿ ಬುಟ್ಟ್ ಕೇಳ್ತ್.

'ಯಾರದ್ ಬಂದೇ...'

ವೀರ ಹೇಳ್ತ್. ಅವು ಒಂದೆರಡ್ ಸೆಕೆಂಡ್‌ಲಿ ತನ್ನ ಸೀರೆ ಸೆರಗ್‌ಗೆ ಕೈ ಒರ್ಸಿ ಕಂಡ್ ಹೊರಗೆ ಹೋತ್.

ಯಾರ್ ಆಗಿರ್‌ದೂತ ಆವು ಆಶ್ಚರ್ಯಂದ ಬಂದ್ ನೋಡ್ತ್.

ಅವಳ ಮೊಕ್‌ಲಿ ಗಾಬರಿ ಕಂಡ್ ಜೀವನ್ ನೆಗಾಡ್ತ್.

'ಓ ಜೀವನ್ ನಾನ್ ಯಾರೋತ ಗ್ಯಾನ ಮಾಡಿದ್ದೆ'

'ಒಳ್ಳೆ ಪೊರ್ಲ್‌ದ್ ಹೈದ ಆಗಿರ್ದಾಂ ತನಾ ?'

ಜೀವನ್ ಕೇಳ್ತ್.

'ಹ್ಞಾಂ ದೇವಯ್ಯ ಅಂಕಲ್‌ದ್ ಮಂಙಗಿಂತ ಪೊರ್ಲ್‌ನ ಹೈದ ಈ ಊರ್‌ಲಿ ಯಾರ್ ಒಳೊ ? ಹಣ, ಆಸ್ತಿ, ವಿದ್ಯೆ ಆದಿಲ್ಲಿ... ಇದೇನ್ ಅನ್‌ಎಕ್ಸ್‌ಪೆಕ್ಟೆಡ್ ವಿಸಿಟ್ ?'

'ಅದಾ ? ನಾವು ನೆಂಟರಾದ್ದರ್‌ಂದಷ್ಟೆ'

ಹೆಂಗೆ ನೆಂಟರಾದ್ದು ? ರಂಜನ್ ಭಾವ ಬದುಕಿ ಇದ್ದಿದ್ರೆ ಆಗ್‌ತಿತ್ತ್. ಇನ್ನಿ ಒಂದ್ ಲೋಟ ಕಾಫಿ ಕುಡಿಯಕ್ ಅಲ್ಲ ?'

'ಖಂಡಿತಾ...'

ವೀರ ಅಡಿಗೆ ಮನೆಗೆ ಹೋತ್. ಜೀವನ್ ಅವಳ ಹಿಂದೆ ನಡ್ತ್.

ಹೊಗೆ ಹಿಡ್ದ್ ಕಪ್ಪಾದ ಗೋಡೆ. ಅದೇ ಕಲರ್‌ದ್ ಸೆಲ್ಫ್. ಅದ್ರೊಳಗೆ ಸವ್ದ್ ಹಳೇ ದಾವ ಗ್ಲಾಸೂ, ಪ್ಲೇಟೊ.

ವೀರನ ಮೇಲೆ ಇದ್ದ ಪ್ರೀತಿಂದಾಗಿ ಜೀವನ್‌ಗೆ ಅಡಿಗೆ ಮನೆ ಒಂದ್ ಪ್ರಶ್ನೆಯೇ ಆತ್‌ಲೆ. ಜೊತೆಗೆ ಅಲ್ಲಿ ಹೊಗೆ ಹಿಡ್ಕಂಡ್ ಇದ್ದ ವಸ್ತುವೆಲ್ಲ ಅವನ ಕಣ್ಣಿಗೆ ಲಾಯ್ಯಾಗಿ ಕಾಣ್ತಿತ್ತ್.

ಸಣ್ಣವನಾಗಿರ್‌ಕನ ರಂಜನ್‌ನ ಜೊತೆಲಿ ಬರ್ತಿದ್ದ ಜೀವನ್‌ಗೆ ತಿಂಬಕೆ ಕೊಡ್ತಾ ಇದ್ದ ಕೈಮಾತ್ರ ಇಂದ್ ಇಲ್ಲೆ.

'ಎಂತನ ಗ್ಯಾನ ಮಾಡ್ತಾ ಒಳ ಜೀವನ್ ?'

ಕಾಫಿ ಕೊಟ್ಟ್ ವೀರ ಕೇಳ್ತ್.

ನಿನ್ನ ಅವ್ವನ ಗ್ಯಾನ ಬಾತ್ ವೀರ. ಮರಣ ಎಷ್ಟ್ ಬೇಗ ಒಬ್ಬ ಮನ್ಸನ ಚಿತ ಮಾಡಿಬುಟ್ಟದೆ ನೋಡ್.

'ಬೋರ್‌ಗುಡ್ಡೆ ದೇವಯ್ಯ ಅಂಕಲ್‌ದ್ ಮಂಙ ಹಿಂಗೆಲ್ಲ ಗ್ಯಾನ ಮಾಡ್ದು ನೋಡಿ ನಂಗೆ ತುಂಬ ಆಶ್ಚರ್ಯ ಆಗ್ತಾ ಉಟ್ಟ್'

ವೀರ ಹೇಳಿಕಂಡ್ ನೆಗಾಡ್ತ್.

ನನ್ನ ಡ್ಯಾಡಿದ್ ಕ್ಯಾರಪ್‌ಲಿ ನೀನ್ ನನ್ನ ದೂಂಕೆ ಬತ್ತ್‌ತ ನಾನ್ ನಿನ್ನ ಕೈಲಿ ಸುಮಾರ್ ಸರ್ತಿ ಹೇಳಿಯೊಳೆ. ಇನ್ನೊಮ್ಮೆ ಹೇಳ್ರೆ ಮಾತ್ರ ನಾನ್ ಇನ್ನ್ ಈ ಮನೆ ಮೆಟ್ಲ್ ಹತ್ತ್‌ಲೆ ನೋಡು'

ಜೀವನ್ ಸೊಲ್ಪ ಸೀರಿಯಸ್ ಮಾಡಿಕಂಡೇ ಹೇಳ್ತ್.

ಇಲ್ಲಿ ವರೆಗೆ............

ಗಾಳಿಮರ ಸೋಮಯ್ಯ ಮತ್ತೆ ಅವನ ಮಂಙ ನೀಲಿಮನ ಎನ್‌ಕ್ವಯರಿ ಮಾಡ್ಯಂಡ್ ಇರ್‌ಕನ ಚಂಗುಮಣಿ ಮತ್ತೆ ಫ್ಯಾಕ್ಟ್ ಮಾದಯ್ಯ ಇಬ್ಬರೂ ಒಂದೊಂದು ಕಡೆಂದ ಬಂದ್ ಸ್ಟೇಷನ್ಲಿ ಸರಂಡರ್ ಆದವೆ. ಹಂಗಾಗಿ ಪೊಲೀಸ್‌ನವು ಈ ವಿಷ್ಯನ ಬೋರ್‌ಗುಡ್ಡೆ ದೇವಯ್ಯಂಗೆ ಫೋನ್ ಮಾಡಿ ತಿಳ್ಸಿವೆ. ಆಗ ದೇವಯ್ಯ ಅಪ್ಪ ಮಗಳ ಇಬ್ಬರ ಬಿಡುಗಡೆ ಮಾಡಿಕೆ ಹೇಳ್ದೆ.

ಮುಂದೆ ಓದಿ.........

‘ಅಯ್ಯೋ ಸಾರಿಯಪ್ಪಾ, ಇನ್ನ್ ಹಂಗೆ ಹೇಳ್ದಲೆ ಹಂಗೆ ಮಾಡಿಬುಡ್‌ಬಡ. ಬರದೇ ಇಪ್ಪಡ ಅತಾ ?’

ಮೀರಾ ಹೇಳ್ತ್.

ಅಂವ ಕಾಫಿ ಕುಡ್ತ್

‘ಸ್ಟ್ರಾಂಗ್ ಅವ್ವುಟಾ ?’

ಮೀರ ಕೇಳ್ತ್.

‘ಕಾಫಿ ಸ್ಟ್ರಾಂಗ್ ಇಲ್ದೇ ಹೋದ್ರೂ ಈ ಕಾಫಿನ ಮಾಡ್ದ ಆಸಾಮಿ ಮಾತ್ರ ಸೊಲ್ಪ ಸ್ಟ್ರಾಂಗ್ ಆಗುಟ್ಟು.’

ಮೀರ ತನ್ನ ನಾಲಿಗೆ ತುದಿನ ಕಚ್ಚಿಕಂಡ್ ಒಮ್ಮೆ ಕಣ್ಣ್ ಅರಳಿಸಿ ಜೀವನ್‌ನ ಹೆದ್‌ರೊಸ್ಸಹಂಗೆ ನೋಡ್ತ್.

ಆಗಳೂ ಅವುಳು ಜೀವನ್‌ಗೆ ತುಂಬ ಲಾಯಕಾಗಿ ಕಂಡತ್. ಇಬ್ಬರೂ ಸೇರಿ ಬಾಳ ಹೊತ್ತ್ ಮಾತಾಡ್‌ದೊ ದುಃಖ ಮರ್ತ್ ಇಬ್ಬರೂ ಜೋರಾಗಿ ನೆಗಾಡ್ದೊ.

ಸೆಲ್ಫ್‌ಲಿ ಇದ್ದ ಹಳೇ ಡಬ್ಬಗಳ್ನೆಲ್ಲ ಜೀವನ್ ತೆಗ್ದ್ ನೋಡ್ತ್ ಒಂದ್ ಚೂರ್ ಬೆಲ್ಲಕ್ಕ ಒಂದ್ ತುಂಡ್ ಕಾಯಿನ ಸೇರ್ಸಿಕಂಡ್ ಅಂವ ತಿಂದತ್.

ಇಂವ ಬಡಾಯಿ ಇಲ್ಲದ ಒಂದ್ ಒಳ್ಳೆ ಹೈದಾಂತ ಮೀರಂಗೆ ಅನ್ಸಿತ್.

‘ಮಾಂವ ಎಲ್ಲಿಗೆ ಹೋಗೊಳೊ ಮೀರಾ ?’

‘ಅಪ್ಪ ಪೇಟೆಗೆ ಹೋಗುಟ್ಟು, ಗೌಡ ಸಮಾಜಲಿ ಎಂತದೋ ಮೀಟಿಂಗ್ ಉಟ್ಟು ಗಡ.’

‘ನಾನಿನ್ನ್ ಬರ್ಲ್ಲ, ಮಾಂವ ದಾರಿಲಿ ಸಿಕ್ಕಿರೆ ಮಾತಾಡ್ನೆ.’

‘ನೀನ್ ಈಗ ದೂರ ಹೊಸ್ಟದ್ ?’

‘ಕಾಲೇಜ್ ಹಾಸ್ಟೆಲ್‌ಗ’

‘ನೆಕ್ಸ್ಟ್‌ವೀಕ್ ಬಂದಿಯಾ ?’

ಯಾಕೆ ?

‘ನಂಗೆ ಒಂದ್ ಪೋಯೆಟ್ರಿ ಅರ್ಥ ಆಗ್ತಾ ಇಲ್ಲೆ ಸೊಲ್ಪ ಹೇಳಿಕೊಟ್ಟಿಯಾಂತ?’

‘ಓ ಎಸ್.’

ಜೀವನ್ ಹೋತ್. ಅದ್ಯಾಕೋ ಏನೋ ಮೀರ ಕುಸಿಲಿ ಒಮ್ಮೆ ಉಸ್ರ್ ಬುಟ್ಟತ್.

* * *

ಗಾಳಿಪುರ ಸೋಮಯ್ಯನ ಅವನ ಮಗಳು ನೀಲುನ ಮನೆಗೆ ಬುಟ್ಟ್ ಪೊಲೀಸ್ ಜೀಪ್ ವಾಪಸ್ ಹೋಕನ ಗಂಟೆ ಹತ್ತುವರೆ ಆಗಿತ್ತ್. ಅದೇ ಹೊತ್ತ್‌ಗೆ ಬೋರ್‌ಗುಡ್ಡೆ ದೇವಯ್ಯ ಕಾರ್ ತಕಂಡ್ ಪೊಲೀಸ್ ಸ್ಟೇಷನ್‌ಗೆ ಹೋತ್ ಅಲ್ಲಿ ಅವಂಗೆ ಹೋಂಮಿನಿಷ್ಟ್ರಗೆ ಸನ ಸಿಕ್ಕದಂತ ಮರ್ಯಾದಿ ಸಿಕ್ತ್. ಎಲ್ಲಾ ಹಣಬಲ.

ಬೋರ್‌ಗುಡ್ಡೆ ದೇವಯ್ಯನ ಸಹಾಯ ಪಡೆಯದ ಒಂದೇ ಒಂದ್ ಪೇದೆ ಕೂಡ ಆ ಸ್ಟೇಷನ್‌ಲಿ ಇತ್ತ್‌ಲೆ.

ಸಬ್ ಇನ್ಸ್‌ಪೆಕ್ಟರ್ ರಾಮಮೂರ್ತಿ ದೇವಯ್ಯಂಗೆ ಚೇರ್ ಕೊಟ್ಟ್ ಕೂರಿಕೆ ಹೇಳ್ತ್. ಸಿಗರೇಟ್ ತರ್ಸಿ ಕೊಟ್ಟತ್. ಕೇಸ್ದ್ ವಿಚಾರ ಅವು ಮಾತಾಡ್ದೋ, ಕಡೆಗೆ ಅವು ಚಂಗುಮಣಿ ಇದ್ದ ಸೆಲ್‌ನ ಕಡೆಗೆ ನಡ್ದೊ.

ಚಂಗುಮಣಿ ಬರೀ ಚಡ್ಡಿಲಿ ಲಾಕಪ್ ಒಳಗೆ ನಿತ್ತ್‌ಕಂಡ್ ಇದ್ದದ್ ಕಂಡತ್.

‘ಏನ್‌ನೇ ರ್‍ಯಾಸ್ಕಲ್, ನಂಗೆ ನಿನ್ನ ಒಮ್ಮೆ ಲಾಯ್ಕ ನೋಡೊಕು. ಸೊಲ್ಪ ಇತ್ತ ಬಾರಾ.’

ಚಂಗುಮಣಿ ನಿತ್ತಲ್ಲಿಂದ ಅಲ್ಲಾಡ್‌ತ್ಲೆ. ಅವನ ಅಲ್ಲಾಡದಂಗೆ ಎಸ್. ಪಿ. ರಾಮಮೂರ್ತಿ ಮಾಡಿಹಾಕಿತ್ತ್.

‘ಬಾರಾ ಬ್ಲಡಿಫೂಲ್.’

ಎಸ್ ಪಿ ಕಬ್ಬಿಣದ ಗೇಟ್‌ಗೆ ಲಾಟಿಲಿ ಹೊಡ್ದ್ ಹೇಳ್ತ್.

ಚಂಗುಮಣಿ ಮಾತ್ರ ಕಲ್ಲ್‌ನಂಗೆ ನಿತ್ತ್ ಕಂಡೇ ಇತ್ತ್. ಅವಂಗೆ ಒಂದ್ ಒತ್ತ ಕೊಟ್ಟ್ ಅವನ ತಲೆ ಕೂದಲ್ ಹಿಡ್ದ್ ಎಳ್‌ಕಂಡ್ ಬಾತ್

ಅವನ ತುಟಿಲಿ ರಕ್ತ ಬರ್‌ತಿತ್ತ್. ಕೈದ್ ಉಗ್‌ರ್ಲಿ ರಕ್ತ ಒಣಗಿ ಅಂಟಿಕಂಡಿತ್ತ್.

[ಸಶೇಷ]

---

## ಅಸಹಾಯಕತೆ

ಈ ವರ್ಷ ಮಳೆಗಾಲ ಬಾಳ
ನಮ್ಮಪ್ಪ ಒಲೆ ಬುಡದಿಂದೇಳ
ಸಾಲ ಕೊಟ್ಟವೆಲ್ಲಾ ಬನ್ನಿ
ನಮ್ಮಂಗಳ ಮಣ್ಣ್ ತಿನ್ನಿ.

—ಕಲ್ಲಚನ ಕಾರ್ಯಪ್ಪ ಕುಂಬಳದಾಳು

---

[ 18ನೇ ಪುಟದಿಂದ ]

ತಬ್ಬಿ ಹಿಡ್ಕಂಡ್ ನನ್ನ ಕೂಸು, ನೀನ್ ನನ್ನ ಸೊಸೆ ಅಲ್ಲಾ ಮಗುಳುಕಿಂತ ಹೆಚ್ಚ್. ನಾನ್ ನಿನ್ನ ಅರ್ಥ ಮಾಡಿಕಣದೆ ಬಾಯಿಗೆ ಬಂದಂಗೆ ಹೇಳ್ದೆ. ದಮ್ಮಯ್ಯ ನನ್ನ ಕ್ಷಮಿಸ್. ಕೂಸು ನೀವು ಮನೆ ಬುಟ್ಟ್ ಎಲ್ಲಿಗೂ ಹೋದುಬ್ಯಾಡ. ಈ ಆಸ್ತಿ ಮನೆ ಇದೆಲ್ಲಾ ನಿಮಿಗೆ ಇರ್‍ದ್. ಮಕ್ಕ ಲಾಯ್ಕ ಇರಕುತೇಳಿ ಹಗ್‌ಲ್ ರಾತ್ರಿ ದುಡ್ದ್ ಸಂಪಾದನೆ ಮಾಡಿ ಮಡ್‌ಗಿದ್ ನನ್ನಂಗೆ ಕಷ್ಟ, ನನ್ನ ಮಕ್ಕಳಿಗೆ ಬೇಕಾಗದ್ ತೇಳಿ. ಸ್ವಲ್ಪ ದಿನಲಿ ಅಜ್ಜಗೆ ಒಂದು ಪಿಳ್ಳೆ ಆತ್.

ಅಪ್ಪ, ಅವ್ವ, ಮಂಜು ಸೊಸೆ, ಪಿಳ್ಳೆ ಒಬ್ಬರನ್ನ ಒಬ್ಬರು ಅರ್ಥಮಾಡಿಕಂಡ್ ಸುಖಂದ ಬಾಳ್ತ್ತವಳೊ. ಇಂಥ ಘಟನೆಗ ಎಷ್ಟೊ ಸಂಸಾರಲಿ ಬರ್‌ತ್ತಿದ್ದದೆ. ನಾವ್ ನಮ್ಮ ಮನಸ್ಸ್‌ಲಿ ಒಳ್ಳೆತನ ತುಂಬಿದ್ದರೆ ಹಿಂಗೆಲ್ಲಾ ಆದುಲೆ. ●



## ಚಿ ರ ಸ್ಮ ರ ಣೆ

ನೀವು ನಮ್ಮನ್ನಗಲಿ ಇಂದಿಗೆ 30 ಸಂವತ್ಸರಗಳು ಸಂದರೂ
ನಿಮ್ಮ ಸವಿನೆನಪು ಸದಾ ನಮ್ಮ ಹೃದಯದಲ್ಲಿ ಹಚ್ಚ
ಹಸಿರಾಗಿ ಉಳಿದಿದೆ ಹಾಗೂ ನಿಮ್ಮ ಆಶೀರ್ವಾದ
ಸದಾ ನಮ್ಮ ಮೇಲೆ ಇರಲೆಂದು ಬೇಡುವ

ತಡಿಯಪ್ಪನ ಪೂವಯ್ಯ
ಮರಣ : **5-5-1969**

ಪತ್ನಿ ಸಾಕಮ್ಮ, ಮಕ್ಕಳು, ಅಳಿಯಂದಿರು
ಸೊಸೆಯಂದಿರು, ಮೊಮ್ಮಕ್ಕಳು,
ಹಾಗೂ ಮರಿಮಕ್ಕಳು

ಪ್ರ ಕ ಟ ಣೆ

### ತಡಿಯಪ್ಪನ ಕುಮಾರಜಯ

**ಮೋಹಕ ಬಾರ್ & ರೆಸ್ಟೋರೆಂಟ್, ಕಾಳಿದಾಸ ರಸ್ತೆ, ಮೈಸೂರು.**

---



## 6ನೇ ವರ್ಷದ ಚಿರಸ್ಮರಣೆ

ನೀವು ನಮ್ಮನ್ನು ಅಗಲಿ ಇಂದಿಗೆ ಆರು ವರ್ಷವಾದರೂ ನಿಮ್ಮ ನೆನಪು
ಚಿರನೂತನವಾಗಿಯೇ ಇದೆ. ನಿಮ್ಮ ತ್ಯಾಗ, ಪ್ರೀತಿ, ವಾತ್ಸಲ್ಯಗಳಿಂದ
ಕೂಡಿದ ಆದರ್ಶ ಜೀವನ ನಮಗೆ ಮಾರ್ಗದರ್ಶನ, ನಿಮ್ಮ
ಜೀವನದ ಆದರ್ಶವನ್ನು ಎಂದೆಂದಿಗೂ ಮರೆಯಲಾರೆವು.
ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ,

Phone: 08274/58240

ಅಂಚೆಮನೆ ನಂಜುಂಡ
ಜನನ : **8-11-1942**
ಮರಣ : **27-4-1993**

ಪತ್ನಿ : ಅಂಚೆಮನೆ ಜಯಮ್ಮ, ಮಗ : ಅಂಚೆಮನೆ ಸಂಧಿ
ಸೊಸೆ : ಸವಿತ, ಮಗಳು : ಕೆ.ಜೆ. ಮಮತ, ಅಳಿಯ : ಕೆ.ವಿ. ಜಗನ್ನಾಥ್
[ಜಿಲ್ಲಾ ಮಾಹಿತಿ ವಿಜ್ಞಾನ ಅಧಿಕಾರಿ], ಮೊಮ್ಮಗಳು : ಭೂಮಿಕ

---

## ನಿ ಧ ನ

ಬೆಂಗಳೂರಿನ ನಿವಾಸಿ ಎಡಿಕೇರಿ ಸುದರ್ಶನ ಇವರ ತಂದೆ ಸುಬ್ರಾಯನವರು ದಿನಾಂಕ 9-4-1999 ರಲ್ಲಿ ಹೃದಯಾಘಾತದಿಂದ ಬೆಂಗಳೂರಿನ ತಮ್ಮ ನಿವಾಸದಲ್ಲಿ ವೈಕುಂಠವಾಸಿಯಾದರು. ಇವರು ಪತ್ನಿ ಮತ್ತು ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

K R N N-240 10-01-96 TCI Kar.09592

# ಗೌಡ ಮಹಿಳಾ ಒಕ್ಕೂಟ, ಕೊಡಗು (ರಿ) ಮಡಿಕೇರಿ

C/o ಗೌಡ ವಿದ್ಯಾ ಸಂಘ ಕಟ್ಟಡ, ಗುಡ್ಡೆಮನೆ ಅಪ್ಪಯ್ಯಗೌಡ ರಸ್ತೆ, ಮಡಿಕೇರಿ

ಇದರ ಪ್ರಥಮ ವಾರ್ಷಿಕೋತ್ಸವವು ದಿನಾಂಕ **11-5-99**ರ ಮಂಗಳವಾರ ಪೂರ್ವಾಹ್ನ **11-30** ಗಂಟೆಗೆ ಮಡಿಕೇರಿಯ ಕೆಳಗಿನ ಗೌಡ ಸಮಾಜ ಕಟ್ಟಡದಲ್ಲಿ ನಡೆಯಲಿದೆ.

ಉದ್ಘಾಟನೆ :

**ಶ್ರೀಮತಿ ದಂಬೆಕೋಡಿ ಲೀಲಾ ಚಿಣ್ಣಪ್ಪರವರು**

ಅಧ್ಯಕ್ಷತೆ :

**ಶ್ರೀಮತಿ ಪಡಿಕಲ್ಲು ಸೀತಮ್ಮ ಮೂದಪ್ಪರವರಿಂದ**

## —ಮುಖ್ಯ ಅತಿಥಿಗಳಾಗಿ—

ಶ್ರೀಮತಿ ಬಳಪದ ಹೇಮಾವತಿ ಸೋಮಣ್ಣರವರು
ಶ್ರೀಮತಿ ಪಟ್ಟದ ಶೀಲಾಮಣಿ ಪ್ರಭಾಕರರವರು
ಶ್ರೀಮತಿ ಕೆ. ಪಿ. ಚಂದ್ರಕಲಾ ಪ್ರಸನ್ನರವರು
ಶ್ರೀಮತಿ ಮಂದ್ರಿರ ಚಂದ್ರಾವತಿ ನಾಣಯ್ಯರವರು
ಶ್ರೀಮತಿ ಅಮ್ಮಾಜಿರ ಲೀಲಾವತಿ ಪೊನ್ನಪ್ಪರವರು
ಶ್ರೀಮತಿ ಕೋಟೆಂಬೈಲು ಪ್ರೇಮಾ ಆನಂದರವರು
ಶ್ರೀಮತಿ ಮೀನಾಕ್ಷಿ ಗೌಡ ಸುಳ್ಯ ಇವರು ಮತ್ತು
ಶ್ರೀಮತಿ ಕುಯ್ಯಮುಡಿ ಅನಿತಾರಾಣಿ ಇವರುಗಳು ಆಗಮಿಸಲಿದ್ದಾರೆ

—ತಾವುಗಳೆಲ್ಲರೂ ದಯಮಾಡಿ ಸಮಾರಂಭಕ್ಕೆ ಆಗಮಿಸಿ ಸಭೆಯನ್ನು ಚಂದಗಾಣಿಸಬೇಕಾಗಿ ವಿನಂತಿ—

ಮಡಿಕೇರಿ : **27-4-99**

ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯವರು

## :— ಕಾರ್ಯಕ್ರಮ —:

1. ಪ್ರಾರ್ಥನೆ 2. ಉದ್ಘಾಟನೆ 3. ಸ್ವಾಗತ 4. ಅತಿಥಿಗಳಿಂದ ಭಾಷಣ 5. ಅಧ್ಯಕ್ಷರ ಭಾಷಣ
6. ವಂದನಾರ್ಪಣೆ, 7. ಸಾಂಸ್ಕೃತಿಕ ಕಾರ್ಯಕ್ರಮ [ನಂತರ ಊಟದ ವ್ಯವಸ್ಥೆ ಇರುವುದು]

ಪತ್ರಿಕಾ ಪ್ರಕಟಣೆಯ ಸ್ಥಳಧಾನ ಕೊಡುಗೆ : ಕೊಡಗು ಸಂಗಾತಿ ಪಾಕ್ಷಿಕ ಪತ್ರಿಕೆ, ಮೈಸೂರು

Kodagu Sangathi Kannada fortnightly Edited, Published, Printed & Owned by Pattada P Sheelamani, No. 35, Savitha Nilaya I Cross, 4th Block, Jayalaxmipuram, Mysore-570 012. And Printed at Ashirwad Printers, 180/A 6th Main Vinayakanagar Mysore-570012.
Tele ; Office : 0821 / 516771.